ಐಕ್ಯರಂಗ

ವಾರಪತ್ರಿಕೆ

ಭಾರತಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 47 ನವೆಂಬರ್ 18, 1984 ಬೆಲೆ 60 ಪೈಸೆ.

ಮೈಸೂರು ಬಂದ್‌ಗೆ ಕರೆ

ಮೈಸೂರಿನ ಎರಡು ಅತಿದೊಡ್ಡ ಕಾರ್ಖಾನೆಗಳಾದ ಕೆ. ಆರ್. ಮಿಲ್ಸ್ ಮತ್ತು ಐಡಿಯಲ್ ಜಾವಾದ ಮಾಲಕರು ಅನ್ಯಾಯವಾಗಿ ಕಾರ್ಖಾನೆಗಳನ್ನು ಮುಚ್ಚಿ ಹತ್ತು ಸಾವಿರದಷ್ಟು ನಗರದ ಕಾರ್ಮಿಕರನ್ನು ಕಳೆದ 2–3 ತಿಂಗಳುಗಳಿಂದ ಉಪವಾಸ ಬೀಳುವಂತೆ ಮಾಡಿದ್ದನ್ನೂ ಕಾಯಿದೆಗೆ ವಿರುದ್ಧವಾಗಿ ವರ್ತಿಸುತ್ತಿರುವ ಮಾಲಕರ ವಿರುದ್ಧ ರಾಜ್ಯ ಸರಕಾರ ಕ್ರಮ ಕೈಗೊಳ್ಳದಿರುವುದನ್ನು ಖಂಡಿಸುವ ಸಲುವಾಗಿ ಮೈಸೂರು ಬಂದ್ ಆಚರಿಸಬೇಕೆಂದು ಸಿಐಟಿಯು ರಾಜ್ಯ ಸಮಿತಿ ಸಭೆ ಕರೆಕೊಟ್ಟಿದೆ. ಕಾರ್ಮಿಕರಿಗೆ ನ್ಯಾಯ ಸಿಗುವಂತೆ ಮಾಡಲು ಈ ಬಂದ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಎಲ್ಲ ಕಾರ್ಮಿಕರೂ, ಕಾರ್ಮಿಕ ಸಂಘಗಳೂ, ಸಾರ್ವಜನಿಕರೂ ಸಹಕರಿಸಬೇಕಾಗಿ ವಿನಂತಿ.

ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಿರಿ

– ಕಾ|| ಸೂರ್ಯನಾರಾಯಣರಾವ್ ಅವರ ಕರೆ

ಡಿಸೆಂಬರ್ 24 ರಂದು ನಡೆಯಲಿರುವ 8 ನೆಯ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಲೇ ಬೇಕು. ದೇಶದ ಸಮಗ್ರತೆಯ ಉಳಿವಿಗಾಗಿ, ಸಾರ್ವಭೌಮತ್ವದ ರಕ್ಷಣೆಗಾಗಿ, ನಾಗರಿಕ ಹಕ್ಕುಗಳನ್ನು ಕಾಪಾಡುವುದಕ್ಕಾಗಿ, ಅಮೇರಿಕ ಮತ್ತಿನ್ನಿತರ ಸಾಮ್ರಾಜ್ಯಶಾಹಿ ಶಕ್ತಿಗಳ ವಿದೇಶೀ ಹಣದ ಸಹಾಯದಿಂದ ದೇಶವನ್ನು ವಿಭಜಿಸಲು ಪ್ರಯತ್ನ ನಡೆಸುತ್ತಿರುವ ಛಿದ್ರಕಾರಿ ಶಕ್ತಿಗಳನ್ನೂ ಅಮೇರಿಕದ ಗೂಢಚಾರ ಏಜಂಟರನ್ನೂ ನಾಶ ಮಾಡ ಬೇಕಾದರೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಗೆಲ್ಲಿಸಿ, ಕಾಂಗ್ರೆಯನ್ನು ಸಂಪೂರ್ಣ ಸೋಲಿಸಿದರೆ ಮಾತ್ರ ಸಾಧ್ಯ. ಸಂಘಟಿತ ಕಾರ್ಮಿಕರೂ, ಸಾರ್ವಜನಿಕರೂ ಈ ಮಹತ್ತರವಾದ ಕರ್ತವ್ಯವನ್ನು ಯಶಸ್ವಿಯಾಗಿ ಪೂರೈಸಬೇಕೆಂದು, ರಾಜ್ಯ ಸಿಐಟಿಯು ಅಧ್ಯಕ್ಷರಾದ ಸೂರ್ಯನಾರಾಯಣರಾವ್ ಅವರು ತಾ|| 15 ರಂದು ಮೈಸೂರಿನ ಟೌನ್ ಹಾಲ್ ಮೈದಾನದಲ್ಲಿ ನೆರೆದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಕರೆಕೊಟ್ಟರು.

ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಯ ಸಭೆ ನವಂಬರ್ 14–15 ರಂದು ಮೈಸೂರಿನಲ್ಲಿ ಸೇರಿತ್ತು. ಅದರ ಅಂಗವಾಗಿ ತಾ|| 15 ರಂದು ಕಾರ್ಮಿಕರ ಮೆರವಣಿಗೆ ಹಾಗೂ ಸಾರ್ವಜನಿಕ ಸಭೆ ಏರ್ಪಡಿಸಲಾಗಿತ್ತು.

ಇಂದಿರಾ ಗಾಂಧಿಯ ಮರಣ ಕಾಂಗ್ರೆಯ ಆರ್ಥಿಕ–ರಾಜಕೀಯ ಧೋರಣೆಯಲ್ಲಿ ಬದಲಾವಣೆ ಉಂಟು ಮಾಡಲು ಸಾಧ್ಯವಿಲ್ಲ. ಯಾಕೆಂದರೆ ಕಾಂಗ್ರೆ ಪಕ್ಷ ಹಿರೆಬಂಡವಲದಾರರ ಭೂಮಾಲಕರ ಹಿತರಕ್ಷಣೆ ಮಾಡುತ್ತ ಬಂದಿದೆ. ಇನ್ನು ಮುಂಚೆ ಕೂಡ ಅದು ಸುಲಿಗೆಖೋರರ ಹಿತ ಸಾಧಿಸುವ ಪಕ್ಷವಾಗಿಯೇ ಮುಂದುವರಿಯುತ್ತದೆ. ಆದ್ದರಿಂದ ಕಾರ್ಮಿಕರಿಗೆ ಹಿತವಾಗಬೇಕಾದರೆ ಕಾಂಗ್ರೆಯ್ಯನ್ನು ಸೋಲಿಸಲೇ ಬೇಕೆಂದು ಅವರು ಹೇಳಿದರು.

ತನ್ನ ರಕ್ಷಕರಿಂದಲೇ ಇಂದಿರಾ ಗಾಂಧಿಯವರು ಮೃತ್ಯುವಶರಾದರೆಂಬುದನ್ನು ನೋಡುವಾಗ, ಅವರ ಆಡಳಿತೆಯಲ್ಲಿ ಪೋಲೀಸ್ ಖಾತೆ ಹಾಗೂ ಸೆಕ್ಯೂರಿಟಿ ಎಷ್ಟು ಹದಗೆಟ್ಟಿದೆ, ಅಮೇರಿಕದ ಗುಪ್ತದಳದವರು ಎಷ್ಟು ಸಲೀಸಾಗಿ ಪ್ರಧಾನ ಮಂತ್ರಿಯವರ ರಕ್ಷಣಾ ದಳದಲ್ಲಿ ಸೇರಿ ಕೊಂಡಿದ್ದಾರೆಂಬುದನ್ನು ನೋಡಿದರೆ ದೇಶಕ್ಕೆ ಎಷ್ಟು ಗಂಡಾಂತರವಿದೆಂಬುದು ಸ್ಪಷ್ಟವಾಗುತ್ತದೆಂದು ಎಚ್ಚರಿಸಿದರು.

ಮೈಸೂರಿನಲ್ಲಿ ಅತ್ಯಂತ ಹಳೆಯ ಕೈಗಾರಿಕೆಯಾದ ಕೃಷ್ಣ ರಾಜೇಂದ್ರ ಬಟ್ಟೆ ಕಾರ್ಖಾನೆಯನ್ನೂ ಐಡಿಯಲ್ ಜಾವಾ ಕಾರ್ಖಾನೆಯನ್ನೂ ಮಾಲಕರು ಮುಚ್ಚಿರುವುದನ್ನು ಸಿಐಟಿಯು ಅಧ್ಯಕ್ಷರು ಖಂಡಿಸಿ, ಹೆಗಡೆ ಸರಕಾರ ಮಾಲಕರು ಅನ್ಯಾಯವಾಗಿ ಕಾರ್ಖಾನೆ ಮುಚ್ಚಿರುವುದರ ವಿರುದ್ಧ ದೃಢವಾದ ನಿಲುಮೆ ತಾಳಿ, ಎರಡೂ ಕಾರ್ಖಾನೆಗಳು ಕೂಡಲೇ ತೆರೆದು, ಕಾರ್ಮಿಕರಿಗೆ ನ್ಯಾಯ ಸಿಗುವಂತೆ ಮಾಡಬೇಕೆಂದು ಸೂರ್ಯನಾರಾಯಣರಾವ್ ಹೇಳಿದರು.

ಇಂದಿರಾ ಕಾಂಗ್ರೆಸ್ಸಿನ 35 ವರ್ಷಗಳ ಆಡಳಿತೆಯಿಂದಾಗಿ ದೇಶದ ಆರ್ಥಿಕ ರಾಜಕೀಯ ಪರಿಸ್ಥಿತಿ ಸಂಪೂರ್ಣ ಹದಗೆಟ್ಟಿದ್ದು, ಒಂದೆಡೆ ಬೆಲೆ ಏರುತ್ತಲೇ ಇರುವಾಗ ಮತ್ತೊಂದೆಡೆ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಅದೇ ಸಮಯದಲ್ಲಿ ಕಾರ್ಖಾನೆಗಳ ಮುಚ್ಚುವಿಕೆ, ಕೆಲಸಗಾರರಲ್ಲಿ ಕಡಿತ, ನೌಕರಿಯಲ್ಲಿ ಅಸ್ಥಿರತೆಗಳನ್ನೆಲ್ಲ ದಿನನಿತ್ಯ ನೋಡುತ್ತಿದ್ದೇವೆಂದೂ ಇವುಗಳಿಗೆಲ್ಲ ಪರಿಹಾರ ಒದಗಬೇಕಾದರೆ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಿ ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳ ಬದಲಿ ಸರಕಾರ ರಚಿಸುವುದು ಅತ್ಯಗತ್ಯವೆಂದೂ ಹೇಳಿ ಆ ಗುರಿ ಸಾಧನೆಗಾಗಿ ಕಾರ್ಮಿಕ ವರ್ಗ ರಾಜಕೀಯ ತಿಳುವಳಿಕೆಯನ್ನು ಪಡೆದು ಇತರ ವರ್ಗದ ಜನರನ್ನೂ ಸಂಘಟಿಸಿ ಬಲಿಷ್ಟವಾದ ಚಳುವಳಿ ನಡೆಸಬೇಕೆಂದೂ ಕರೆಕೊಟ್ಟರು.

ಸಿಐಟಿಯು ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಮತ್ತು ಬಿ. ಮಾಧವ ರಾಜ್ಯದ ರಾಜಕೀಯ ಪರಿಸ್ಥಿತಿಯನ್ನೂ ಕಮಿಟಿಯ ನಿರ್ಣಯಗಳನ್ನೂ ವಿವರಿಸಿ ಭಾಷಣ ಮಾಡಿದರು. ಹಿರಿಯ ಕಾರ್ಮಿಕ ಮುಖಂಡ ಎಂ. ಎಸ್. ಉಗ್ರಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಮೋಹನಕುಮಾರ್ ಸ್ವಾಗತಿಸಿದರು.

ಎಂಟನೇ ಲೋಕಸಭೆ ಚುನಾವಣೆ

ನಮ್ಮ ದೇಶದ ಎಂಟನೆಯ ಲೋಕಸಭೆ ಚುನಾವಣೆಯ ವೇಳಾಪಟ್ಟಿ ಪ್ರಕಟವಾಗಿದೆ. ಡಿಸೆಂಬರ್ 24 ಮತ್ತು 27 ರಂದು ಕೋಟ್ಯಾವಧಿ ಮತದಾರರು ಮತನೀಡಿ ದೇಶದ ಭವಿಷ್ಯ ನಿರ್ಧಸಲಿದ್ದಾರೆ.

ಲೋಕಸಭೆಯ ಚುನಾವಣೆಯ ಕುರಿತು ಕಳೆದ ಕೆಲವು ತಿಂಗಳುಗಳಿಂದಲೂ ಊಹಾ ಪೋಹಕ್ಕೇನೂ ಕಡಿಮೆ ಇರಲಿಲ್ಲ. ಈಗ ಅಸ್ತಿತ್ವದಲ್ಲಿರುವ ಲೋಕಶಾಹಿ ಪದ್ಧತಿಯ ಬದಲಾಗಿ ಅಧ್ಯಕ್ಷೀಯ ಪದ್ಧತಿಯನ್ನು ಜ್ಯಾರಿಯಲ್ಲಿ ತರುವ ಉದ್ದೇಶದಿಂದ ಕೇಂದ್ರ ಮಂತ್ರಿ ಸಾಳೆಯವರ ಮೂಲಕ ಅಧ್ಯಕ್ಷೀಯ ಪದ್ಧತಿಯ ಸರಕಾರದ ಒಳಿತಿನ ಕುರಿತು ಪ್ರಚಾರ ನಡೆಸಲಾಯಿತು. ಈಗಿರುವ ಪದ್ಧತಿಯನ್ನು ಬದಲಾಯಿಸುವ ವಿಚಾರ ತನಗಿಲ್ಲೆಂದು ಇಂದಿರಾ ಗಾಂಧಿಯವರು ಹೇಳುತ್ತ ಬಂದಿದ್ದರೂ ಕೊನೆ ಗಳಿಗೆಯಲ್ಲಿ ತನ್ನ ಪ್ರಚೋದನೆಯಿಂದಲೇ ಮಂತ್ರಿ ಸಾಳೆಯವರು ಹೊಸ ವಿಚಾರಕ್ಕೆ ಚಾಲನೆ ನೀಡಿದರೆಂಬುದನ್ನು ಒಪ್ಪಿಕೊಂಡರು.

ಮುಂಬರುವ ಲೋಕಸಭೆ ಚುನಾವಣೆಯಲ್ಲಿ ತನ್ನ ಪಕ್ಷಕ್ಕೆ ಎರಡು ಮೂರಂಶ ಬಹುಮತ ಸಿಗುವುದಗೆ ಕುರಿತು ಸಂಶಯವಿದ್ದುದರಿಂದ ಈಗಿನ ಲೋಕಸಭೆಯಲ್ಲಿಯೇ ಸಂವಿಧಾನ ಬದಲಾವಣೆ ಮಾಡಿ ಅಧ್ಯಕ್ಷೀಯ ಪದ್ಧತಿ ಸರಕಾರದ ನಿರ್ಣಯ ಕೈಗೊಳ್ಳಬಹುದೆಂಬ ಸಂಶಯವೂ ಇತ್ತು.

ಎನ್. ಟಿ. ರಾಮರಾವ್ ಸರಕಾರದ ವಿಸರ್ಜನೆ, ಅದಕ್ಕೆ ಜನರ ಪ್ರತಿರೋಧ, ಕೊನೆಗೆ ಜನತೆಯ ಹೋರಾಟಕ್ಕೆ ವಿಜಯ, ಎನ್. ಟಿ. ಆರ್. ಅವರು ಪುನಃ ಮಂತ್ರಿ ಮಂಡಲರಚಿಸುವಂತಾದ ಘಟನೆಗಳೆಲ್ಲ ಇಂದಿರಾ ಪ್ರಭಾವಕ್ಕೆ ಪ್ರತಿಕೂಲವಾಗಿದ್ದವು. ಆ ಕಾರಣಗಳಿಂದಾಗಿಯೂ ಲೋಕಸಭೆ ಚುನಾವಣೆ ಮುಂದೂಡಲ್ಪಡಬಹುದೆಂಬ ಸಂಶಯವಿತ್ತು.

ಇಂದಿರಾ ಗಾಂಧಿಯವರ ಅಕಸ್ಮಿಕ ಮರಣದ ನಂತರ ಕೂಡ, ದೇಶದಲ್ಲಿ ಉಂಟಾಗಿರುವ ಅಸ್ಥಿರ ರಾಜಕೀಯ ಪರಿಸ್ಥಿತಿಯಿಂದಾಗಿ ಚುನಾವಣೆ ಮುಂದೂಡಲ್ಪಡಬಹುದೆಂಬ ಸಂಶಯಕ್ಕೆ ಎಡೆಮಾಡಿಕೊಡಲಾಗಿತ್ತು.

ಆದರೆ ಈಗ ಚುನಾವಣೆ ಘೋಷಿಸಲ್ಪಟ್ಟಿದೆ. ಇದು ಸಾಹಜಿಕವಾದ ನಿರ್ಣಯವೆಂದು ಸಿ. ಪಿ. ಐ. (ಎಂ) ಪ್ರಧಾನ ಕಾರ್ಯದರ್ಶಿ ಇ. ಎಂ. ಎಸ್. ನಂಬೂದರಿಪಾದ್‌ಅವರು ಹೇಳಿದ್ದಾರೆ. ಇಂದಿರಾ ಗಾಂಧಿಯ ಕೊಲೆಯಿಂದಾಗಿ ಜನರಲ್ಲಿ ಹುಟ್ಟಿಕೊಂಡಿರುವ ಸಹಾನುಭೂತಿಯನ್ನು ಮತದಾನದ ಮೂಲಕ ದುರ್ಲಾಭ ಪಡೆಸಿಕೊಳ್ಳುವ ಸಲುವಾಗಿಯೇ ಇಂದಿರಾ ಚಿತಾಭಸ್ಮ ಇನ್ನೂ ಬಿಸಿಯಾಗಿರುವಾಗಲೇ ಹದಿನೈದು ದಿವಸ ಮುಂಚಿತವಾಗಿಯೇ ಚುನಾವಣೆ ಘೋಷಿಸಲಾಯಿತೆಂದು ಕೆಲವು ವಿರೋಧ ಪಕ್ಷಗಳು ಆರೋಪ ಹೊರಿಸಿವೆ.

1985 ಜನವರಿ20ರಂದು ಈಗಿರುವ. ಲೋಕಸಭೆಯ ಅವಧಿ ಮುಗಿಯುತ್ತಿವುದರಿಂದ ಅದಕ್ಕಿಂತ ಮುಂಚಿತವಾಗಿಯೇ ಸಂವಿಧಾನದ ಪ್ರಕಾರ ಚುನಾವಣೆ ನಡೆಯಲೇಬೇಕಾಗಿದೆ. ಹೊಸ ಲೋಕಸಭೆಯ ಚುನಾವಣೆಯನ್ನು ಘೋಷಿಸುವಾಗ ಅಸ್ತಿತ್ವದಲ್ಲಿರುವ ಲೋಕಸಭೆಯನ್ನು ವಿಸರ್ಜಿಸುವ ರೂಢಿ ಅನುಸರಿಸಲಾಗುತ್ತಿತ್ತು. ಹಾಗಾದ್ದಲ್ಲಿ ಈಗಿರುವ ಲೋಕಸಭಾ ಸದಸ್ಯರ ನಿವೃತ್ತಿ ವೇತನಕ್ಕೆ ಅಡ್ಡಿಯಾಗಬಹುದೇ ಎಂಬ ಸಂಶಯ ಈ ಮಧ್ಯೆ ಎಬ್ಬಿಸಲಾಗಿತ್ತು.

ಹೊಸ ಲೋಕಸಭೆ 1985 ಜನವರಿ 20ಕ್ಕೆ ಅಸ್ತಿತ್ವದಲ್ಲಿ ಬರುವುದರಿಂದ ಆ ತಾರೀಕಿನವರೆಗೆ ಈಗಿರುವ ಸದಸ್ಯರ ಸದಸ್ಯತ್ವ ಮುಂದುವರಿಯುತ್ತದೆ. ನಿವೃತ್ತಿ ವೇತನಕ್ಕಾಗಿ ಯಾರೂ ಚಿಂತಿಸುವ ಕಾರಣವಿಲ್ಲೆಂದು ಚುನಾವಣಾಧಿಕಾರಿಗಳು ಹೇಳಿಕೆ ನೀಡಿ ಜನರ ಸಮಸ್ಯೆ ಅವುಗಳ ಪರಿಹಾರದ ಕುರಿತು ಚಿಂತಿಸದೆ ನಿವೃತ್ತಿ ವೇತನದ ಕುರಿತೇ

(8ನೇ ಪುಟ ನೋಡಿ)

"ಕೊಲೆಗಡುಕರು ಇಲ್ಲಿದ್ದಾರೆ — ಹಿಡಿಯಿರಿ ಅವರನ್ನು"

ದಿಲ್ಲಿ ಸಿ. ಪಿ. ಐ. (ಎಂ) ಕಮಿಟಿಯ ಆಹ್ವಾನ

ಇಂದಿರಾ ಗಾಂಧಿಯ ಕೊಲೆಯ ನೆಪದಲ್ಲಿ ದಿಲ್ಲಿಯಲ್ಲಿ ಸಿಖ್ಖರ ಹತ್ಯಾಕಾಂಡ ನಡೆಯಿತು. ಮನೆಗಳನ್ನು ಸುಡಲಾಯಿತು. ಅವರಿಗೆಲ್ಲ ಆಶ್ರಯ ಒದಗಿಸಲು ಸರಕಾರ ಅಸಮರ್ಥವಾದಾಗ ದಿಲ್ಲಿಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಇತರ ಜನರೊಡನೆ ಸೇರಿ ನಾಗರಿಕ ಏಕತಾ ಮಂಚ ರಚಿಸಿ ದಬ್ಬಾಳಿಕೆಗೊಳಗಾದವರಿಗೆಲ್ಲ ಆಶ್ರಯ ಒದಗಿಸಿತ್ತು. ಊಟೋಪಚಾರದ ವ್ಯವಸ್ಥೆ ಮಾಡಿದ್ದರು.

ಈಗ ದಿಲ್ಲಿಯ ಪರಿಸ್ಥಿತಿ ಎಲ್ಲ ಸರಿಹೋಗಿದೆಂದು ಪ್ರಚಾರಮಾಡುವ ಸಲುವಾಗಿ ಸಿಖ್ ಕುಟುಂಬಗಳೆಲ್ಲ ತಂತಮ್ಮ ಮನೆಗಳಿಗೆ ವಾಪಸಾಗಬೇಕೆಂದು ದಿಲ್ಲಿ ಆಡಳಿತೆ ಒತ್ತಾಯ ಮಾಡುತ್ತಿದೆ. ಶಿಬಿರಗಳಲ್ಲಿರುವವರಿಗೆ ಆಹಾರವನ್ನೂ ನಿರಾಕರಿಸುತ್ತಿದೆ. ತಮ್ಮ ಮೇಲೆ ಆಕ್ರಮಣ ಮಾಡಿದವರನ್ನು ಸರಕಾರ ಬಂಧಿಸಿಲ್ಲ, ತಮಗಿನ್ನೂ ಅಪಾಯವಿದೆ, ರಕ್ಷಣೆಯ ಆಶ್ವಾಸನೆ ಸಿಕ್ಕಿಲ್ಲೆಂದು ಹೇಳಿ ನಿರಾಶ್ರಿತರೆಲ್ಲ ಶಿಬಿರಬಿಟ್ಟು ಹೋಗುತ್ತಿಲ್ಲ ಬೇರೆ ಆಶ್ರಯದ, ಜೀವನೋಪಾಯದ ವ್ಯವಸ್ಥೆ ಮಾಡದೆ ಶಿಬಿರಗಳನ್ನೆಲ್ಲ ಮುಚ್ಚುತ್ತಿರುವುದನ್ನು ದಿಲ್ಲಿಯಪಾರ್ಟಿ ಬಲವಾಗಿ ಖಂಡಿಸಿದೆ. "ದಿಲ್ಲಿಯಲ್ಲಿ ಎಲ್ಲವೂ ಸರಿಹೋಗಿದೆಂಬ ಸುಳ್ಳು ಚಿತ್ರವನ್ನು ತೋರಿಸುವ ಸಲುವಾಗಿ ಶಿಬಿರಗಳನ್ನೆಲ್ಲ ಮುಚ್ಚಲಾಗುತ್ತಿದೆ" ಎಂಬ ಆರೋಪವನ್ನು ದಿಲ್ಲಿ ಸಿ. ಪಿ. ಐ (ಎಂ) ಕಾರ್ಯದರ್ಶಿ ಪ್ರಕಾಶ ಕಾರಟ್ ಅವರು ದಿಲ್ಲಿ ಆಡಳಿತೆಯ ಮೇಲೆ ಹೊರಿಸಿದ್ದಾರೆ. ಸಿಖ್ ಕುಟುಂಬಗಳ ಮೇಲೆ ಅಮಾನುಷ ದಬ್ಬಾಳಿಕೆ ನಡೆಸಿದ ಗುಂಡಾ ಜನರೆಲ್ಲಾ ಬಹಿರಂಗವಾಗಿಯೇ ಅಲೆದಾಡುತ್ತಿರುವಾಗ ಈ ಜನರಿಗೆ ಆಶ್ರಯ ಮುಂದುವರಿಸುವ ಅಗತ್ಯವಿದೆಂಬು ಸರಕಾರಕ್ಕೆ ತಿಳಿಸಿದ್ದಾರೆ. ಈ ರೀತಿ ಒತ್ತಾಯದಿಂದ ಇವರನ್ನೆಲ್ಲ ಶಿಬಿರಗಳಿಂದ ಹೊರದೂಡುವುದು ಅಪಾಯಕಾರಿ ಎಂದು ಎಚ್ಚರಿಸಿದ್ದಾರೆ.

ಪೂರ್ವ ದಿಲ್ಲಿಯ ವಿನೋದನಗರಕ್ಕೆ ವಾಪಸ್ಸಾದ ಸಿಖ್‌ರ ಮೇಲೆ ಹೋದ ರವಿವಾರ ಮತ್ತೆ ದಬ್ಬಾಳಿಕೆ ನಡೆಸುವ ಪ್ರಯತ್ನ ನಡೆಯಿತಾದರೂ ಸೋಮವಾರದವರೆಗೂ ಪೊಲೀಸರು ಬಂದೋಬಸ್ತಿಗೆ ಬರಲಿಲ್ಲವೆಂದು ಆರೋಪಿಸಿದ್ದಾರೆ. ಪೊಲೀಸರ ಮತ್ತು ಸರಕಾರದ ಧೋರಣೆಯಿಂದಾಗಿ ನಿರಾಶ್ರಿತರಿಗೆ ಸಿಗಬೇಕಾದ ಆಶ್ರಯ ಹಾಗೂ ಪರಿಹಾರ ಬರೇ ತಮಾಷೆಯಾಗಿ ಕಂಡು ಬರುತ್ತಿಯೆಂದು ಉದ್ಗಾರ ತೆಗೆದಿದ್ದಾರೆ.

ದಿಲ್ಲಿಯಲ್ಲಿ ಸತ್ತವರ ಸಂಖ್ಯೆ ಬರೇ 164 ಎಂದು ದಿಲ್ಲಿ ಆಡಳಿತೆ ಹೇಳಿರುವುದನ್ನು ಪ್ರಕಾಶಕಾರಟ್ ಅವರು ಸುಳ್ಳೆಂದು ಆರೋಪಿಸಿ ಪೂರ್ವ ದಿಲ್ಲಿಯಲ್ಲಿಯೇ 508 ಜನರು ಸತ್ತಿದ್ದಾರೆಂದು ಒಟ್ಟು 2000 ದಿಂದ 2500 ಜನ ಮರಣ ಹೊಂದಿದ್ದಾರೆಂದೂ ಹೇಳಿದ್ದಾರೆ. ಸಿ. ಪಿ. ಐ (ಎಂ) ಪಕ್ಷದ ಕಾರ್ಯಕರ್ತರು ಮರಣ ಪರಿಹಾರ ನಿಧಿಗಾಗಿ ಅರ್ಜಿಗಳನ್ನು ಬರೆಯಲಿಕ್ಕೆ ಸಹಾಯ ಮಾಡುತ್ತಿದ್ದು ಅವರಿಗೆ ಸರಿಯಾದ ಅಂಖ್ಯೆ - ಸಂಖ್ಯೆ ಲಭ್ಯವಾಗಿದೆಯೆಂದು ಹೇಳಿದ್ದಾರೆ.

ದಿಲ್ಲಿಯ ಆಡಳಿತೆ ಎಷ್ಟು ಅಮಾನುಷವಾಗಿ ವರ್ತಿಸುತ್ತಿದೆಂಬುದುಕ್ಕೆ ಒಂದು ಉದಾಹರಣೆ. ಪಾರ್ಟಿ ಕಾರ್ಯಕರ್ತರು ನಿರಾಶ್ರಿತ ಶಿಬಿರಗಳಲ್ಲಿರುವವರಿಗೆ ಕೊಡುವ ಸಲುವಾಗಿ ಬಟ್ಟೆ, ಆಹಾರಗಳನ್ನು ತೆಗೆದುಕೊಂಡು ಹೋದಾಗ ಆ ಶಿಬಿರಗಳಲ್ಲಿ ಸಿಖ್ ಕುಟುಂಬಗಳಿದ್ದರೂ ಕೂಡ, ಶಿಬಿರಗಳು ಮುಚ್ಚಲ್ಪಟ್ಟವೆಂದು ಹೇಳಿ ಪರಿಹಾರವಸ್ತುಗಳನ್ನೆಲ್ಲ ಶಿಬಿರಗಳಲ್ಲಿ ವಿತರಣೆ ಮಾಡಲಿಕ್ಕೆ ಅವಕಾಶಕೊಡದೆ, ಅವುಗಳನ್ನೆಲ್ಲ ವಾಪಸ್ಸು ಕಳುಹಿಸಿರುವುದು ದಿಲ್ಲಿ ಆಡಳಿತೆಯ ಕ್ರೂರ ನೀತಿ ಎಂದು ದೂರಿದ್ದಾರೆ. ಯಾವ ಯಾವ ಪ್ರದೇಶಗಳಲ್ಲಿ ಎಷ್ಟು ಜನ ಸತ್ತಿದ್ದಾರೆಂಬ ಸಂಖ್ಯೆಯನ್ನೂ ಪತ್ರಿಕಾಕರ್ತರಿಗೆ ಒದಗಿಸಿದ್ದಾರೆ.

ದಿಲ್ಲಿಯ ಕಾಂಗೈ ರಾಜಕಾರಣಿಗಳನ್ನೊಳಗೊಂಡ 74 ಜನರ ಯಾದಿಯನ್ನೂ ಪ್ರಕಾಶಕಾರಟ್ ಅವರು ಪತ್ರಿಕಾಕರ್ತರಿಗೆ ಒದಗಿಸಿ, ನಿರ್ವಾಸಿತರ ಶಿಬಿರಗಳಲ್ಲಿದ್ದವರು ತಮ್ಮ ಮೇಲೆ ಆಕ್ರಮಣ ಮಾಡಿದವರ, ಬೆಂಕಿ ಹಚ್ಚಿದವರ, ಕೊಲೆ ಮಾಡಿದವರನ್ನು ಗುರುತಿಸಿ ತಮಗೆ ಹೆಸರು ಒದಗಿಸಿದ್ದಾರೆಂದು ಹೇಳಿದ್ದಾರೆ. ನಿರಾಶ್ರಿತರು ಕೊಲೆಯಾದಿಯಲ್ಲಿ ಒಬ್ಬ ದಿಲ್ಲಿ ಮೆಟ್ರೋಪಾಲಿಟನ್ ಸದಸ್ಯ ನಗರಸಭೆ ಸದಸ್ಯರ ಇಬ್ಬರು ಮಕ್ಕಳು, ಕಾಂಗೈಗೆ ಸೇರಿದ ಮೂವರು ನಗರಸಭೆ ಸದಸ್ಯರ ಹೆಸರುಗಳಿವೆ. ಈ ಮೂರು ಜನರಲ್ಲಿ ಒಬ್ಬ ನಗರಸಭಾ ಸದಸ್ಯ ಅಕ್ಟೋಬರ್ 31 ರಂದು ರಾತ್ರಿ ದಿಲ್ಲಿಯ ನೆರೆಕರೆಯ ಗ್ರಾಮ ಪಂಚಾಯತಿ ಪ್ರಧಾನ (ಅಧ್ಯಕ್ಷರು) ಸಭೆ ಕರೆದು ಮುಂದೆ ಮೂರು ದಿವಸ ತಮ್ಮ ಪ್ರದೇಶದಲ್ಲಿ ನಡೆದಂಥ ಅಮಾನುಷ ದಬ್ಬಾಳಿಕೆಯ ಯೋಜನೆ ಸಂಘಟನೆ ಕುರಿತು ಚರ್ಚಿಸಿದ್ದಾರೆಂದು ಆರೋಪಿಸಿದ್ದಾರೆ. ನಿರಾಶ್ರಿತರಿಗೆಲ್ಲ ಸರಕಾರ ಪುನರ್ವಸತಿಯ ವ್ಯವಸ್ಥೆಮಾಡಬೇಕೆಂದೂ, ಅದರಲ್ಲೂ ಮುಖ್ಯವಾಗಿ ಗಂಡಂದಿರನ್ನು ಕಳೆದುಕೊಂಡ ಮಹಿಳೆಯರಿಗೆ ಹೆಚ್ಚಿನ ಗಮನ ಕೊಡಬೇಕೆಂದೂ ಪ್ರಕಾಶ ಕಾರಟ್ ಕೇಳಿಕೊಂಡಿದ್ದಾರೆ.

ದಿಲ್ಲಿ ಪ್ರದೇಶ ಮುಸ್ಲಿಂಲೀಗಿನ ಅಧ್ಯಕ್ಷರಾದ ಬಷೀರ್ ಅಹಮ್ಮದ್ ಖಾನ್ ಅವರು ದಿಲ್ಲಿಯ ಹತ್ಯಾಕಾಂಡದ ಕುರಿತು ನ್ಯಾಯಾಂಗ ವಿಚಾರಣೆಯಾಗಬೇಕೆಂದು ಕೇಳಿಕೊಂಡಿದ್ದಾರೆ. ತಮ್ಮ ಜೀವ ಮತ್ತು ಆಸ್ತಿಗೆ ರಕ್ಷಣೆಯ ಕುರಿತು ಅಲ್ಪ ಮತಸ್ಥರೆಲ್ಲ ಭೀತಿಗೊಂಡಿದ್ದಾರೆಂದೂ, ದಿಲ್ಲಿಯಲ್ಲಿ ನಡೆದಂಥ ದಂಗೆಗಳು ದೇಶದ ಐಕ್ಯತೆಗೆ ಅಪಾಯಕಾರಿಯೆಂದೂ ಅವರು ಹೇಳಿದ್ದಾರೆ. ಇಂದಿರಾ ಕಾಂಗ್ರೆಸ್ ಪಕ್ಷ ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿಯೇ ಹೆಚ್ಚಾಗಿ ದಂಗೆ ನಡೆದಿರುವುದು ಆಶ್ಚರ್ಯವೆಂದು ಹೇಳಿ ಕಾಂಗೈ ಮುಖಂಡರೇ ಲೂಟಿ, ಬೆಂಕಿ, ಹಚ್ಚುವಿಕೆ, ಕೊಲೆಗಳಿಗೆಲ್ಲ ಪ್ರೋತ್ಸಾಹ ನೀಡುತ್ತಿದ್ದರು, ಸಹಾಯಮಾಡುತ್ತಿದ್ದರೆಂದು ಅತ್ಯಾಚಾರಕ್ಕೊಳಪಟ್ಟ ನಿರಾಶ್ರಿತರು ದೂರುತ್ತಿದ್ದರೆಂದೂ ಅವರು ತಮ್ಮ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ದಂಗೆ, ಲೂಟಿಯಲ್ಲಿ ಪಾಲ್ಗೊಂಡಿರುವ ವ್ಯಕ್ತಿಗಳ ಹೆಸರುಗಳನ್ನು ಪ್ರಕಟಿಸಿದರೂ ಕೂಡ ದಿಲ್ಲಿ ಆಡಳಿತೆಯಾಗಲೀ ಕೇಂದ್ರ ಸರಕಾರವಾಗಲೀ ಆಪಾದಿತರನ್ನು ಹಿಡಿದು ಶಿಕ್ಷಿಸುವ ಕ್ರಮವನ್ನೂ ಕೈಗೊಳ್ಳುತ್ತಿಲ್ಲ, ನಿರಾಶ್ರಿತರಿಗೆ ಸಂರಕ್ಷಣೆ, ಪುನರ್ವಸತಿಯ ವ್ಯವಸ್ಥೆಯನ್ನೂ ಮಾಡುತ್ತಿಲ್ಲ. ದೂರದರ್ಶನ, ಆಕಾಶವಾಣಿಗಳಲ್ಲಷ್ಟೇ ಆಶ್ವಾಸನೆಗಳ ಸುರಿಮಳೆಯಿಂದ ಸಮಾಧಾನಗೊಳ್ಳಬೇಕಾಗಿದೆ.

ಕರ್ನಾಟಕ ರಾಜ್ಯದಲ್ಲಿ

ಶಾಲೆ ಬಾಗಿಲಿಗೇ ಪಠ್ಯ ಪುಸ್ತಕಗಳು

— ಎನ್. ಕೆ. ಉಪಾಧ್ಯಾಯ

"ಮುಂದಿನ ಶೈಕ್ಷಣಿಕ ವರ್ಷದಿಂದ ರಾಷ್ಟ್ರೀಕೃತ ಪುಸ್ತಕಗಳನ್ನು ಸರ್ಕಾರವೇ ರಾಜ್ಯದ ಎಲ್ಲಾ ಶಾಲೆಗಳಿಗೂ ತಲುಪಿಸಲಿದೆ" ಎಂದು ಸರಕಾರದ ನಿರ್ಧಾರವನ್ನು ಘೋಷಿಸಿದವರು ಶಿಕ್ಷಣ ಸಚಿವ ರಘುಪತಿಯವರು. ಪ್ರತಿ ವರ್ಷ ಮೇ ಒಂದನೇ ತಾರೀಖಿನೊಳಗೆ ಒಂದನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ. ವರೆಗಿನ ಪುಸ್ತಕಗಳನ್ನು ಛಾಪಿಸಿ ಪ್ರತಿಯೊಂದು ಜಿಲ್ಲೆಗೂ ಈ ಪುಸ್ತಕಗಳನ್ನು ರವಾನಿಸಲಾಗುವುದೆಂದು ಹೇಳಿದ್ದಾರೆ. ಪುಸ್ತಕಗಳನ್ನು ಖಾಸಗಿಯವರು ಮಾರುವುದು ಸಂಪೂರ್ಣ ರದ್ದಾಗುವುದೆಂದೂ. ಪುಸ್ತಕ ಮಾರಾಟ ಮಾಡುವ ಶಾಲೆಗಳಿಗೆ ಶೇ 7 ರಷ್ಟು ಕಮಿಶನ್ ಕೊಡಲಾಗುವುದೆಂದೂ, ಆ ಕಮಿಶನ್ ಹಣವನ್ನು ಶಾಲೆಗಳ ಅಭಿವೃದ್ಧಿಗೆ ಉಪಯೋಗಿಸಬಹುದೆಂದೂ ಆದೇಶ ನೀಡಿದ್ದಾರೆ.

ಪೌರುಷದ ಮಾತುಗಳನ್ನಾಡುವುದರಲ್ಲಿ ರಘುಪತಿಯವರು ಎಂದೂ ಸೋತವರಲ್ಲ. ತಾವು ಎತ್ತರ ಮನುಷ್ಯನೆಂದು ತಿಳಿವೇ ಅವರು ಎತ್ತಿದ ಮಾತುಗಳನ್ನಾಡುವ ರೂಢಿ ಇಟ್ಟುಕೊಂಡಿದ್ದಾರೆ.

ಈಗಿರುವ ಬಂಡವಳಶಾಹಿ ಆಡಳಿತೆ ವ್ಯವಸ್ಥೆಯಲ್ಲಿ ಮೇ ಒಂದರೊಳಗಾಗಿ ಎಲ್ಲಾ ಪುಸ್ತಕಗಳು ಸಿದ್ಧವಾಗಿರಲು ಸಾಧ್ಯವೇ ಎಂಬ ಪ್ರಶ್ನೆ. ಸದ್ಯದ ಪರಿಸ್ಥಿತಿಯಲ್ಲಿ ಶಾಲೆಗಳು ಪ್ರಾರಂಭವಾದ ಕನಿಷ್ಟ ಆರು ತಿಂಗಳ ನಂತರ ಕೆಲವು ಪರೀಕ್ಷೆಗೆ ಒಂದೆರಡು ತಿಂಗಳುಗಳಿರುವಾಗ ಪುಸ್ತಕಗಳು ಲಭ್ಯವಾಗುತ್ತಿವೆ. ಕೆಲವು ಸಲ ಒಂದೇ ಪುಸ್ತಕವನ್ನು ಇಡೀ ವರ್ಗದಲ್ಲಿಯ ವಿದ್ಯಾರ್ಥಿಗಳಿಗೆ ಸುತ್ತಿಸ ಬೇಕಾಗುತ್ತದೆ. ಮಕ್ಕಳು ಇಂಥ ಗಂಭೀರ ಪರಿಸ್ಥಿತಿಯನ್ನೆದುರಿಸುತ್ತಿರುವಾಗ ಸಕಾಲದಲ್ಲೇ ಅವರಿಗೆ ಪುಸ್ತಕ ಪೂರೈಸಲ್ಪಟ್ಟರೆ ಪಾಲಕರಿಗೂ ಮಕ್ಕಳಿಗೂ ಆನಂದ. ಆದರೆ ಇಷ್ಟು ದಿವಸ ಪಠ್ಯ ಪುಸ್ತಕಗಳಿಲ್ಲದೆ "ಬೈ ಹಾರ್ಟ್" ವಿದ್ಯಾಭ್ಯಾಸ ಕಲಿಸುತ್ತಿದ್ದ ಶಿಕ್ಷಕರನ್ನು ರಘುಪತಿಯವರು ಪೇಚಿನಲ್ಲಿ ಸಿಕ್ಕಿಸಿ ಬಿಡುತ್ತಾರೋ ಎಂಬ ಭಯ ಇದೆ. ಮಂತ್ರಿಗಳ ಘೋಷಣೆ ಆಶ್ವಾಸನೆಗಳ ಮಟ್ಟಿಗೆ ಮಾತ್ರ ಸೀಮಿತವಾಗಿವೆಂಬುದನ್ನು ಶಿಕ್ಷಕರು ಬಲ್ಲರು. ಮೇ ಒಂದನೇ ತಾರೀಕು ಅಂತರಾಷ್ಟ್ರೀಯ ಕಾರ್ಮಿಕರ ದಿನಾಚರಣೆ. ಮೇ 1, 1985ರ ಪಠ್ಯ ಪುಸ್ತಕಗಳ ಸಿದ್ಧತೆಯ ದಿನವನ್ನಾಗಿ ಆಚರಿಸಲು ಮುಂದಾಗೋಣ.

ಪಠ್ಯ ಪುಸ್ತಕ ಮಾರಾಟದಿಂದ ಲಭ್ಯವಾಗುವ ಶೇ 7 ರಷ್ಟು ಕಮಿಶನನ್ನು ಶಾಲೆಗಳ ಅಭಿವೃದ್ಧಿಗಾಗಿ ಕೊಡಲಾಗುವುದಂತೆ. ರಾಜ್ಯದಲ್ಲಿಯ ಪ್ರಾಥಮಿಕ ಶಾಲೆಗಳ ದು:ಸ್ಥಿತಿ ನೋಡಿದರೆ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೇ ಎಂಬ ಪ್ರಶ್ನೆ ಉದ್ಭೂತವಾಗುತ್ತದೆ. ಗಾಳಿ-ಬೆಳಕಿಲ್ಲದ, ಮಳೆಯಲ್ಲಿ ಸೋರುವ ಅಷ್ಟೇ ಅಲ್ಲ ಮಕ್ಕಳ ಮೇಲೆ ಬೀಳುವಂಥ ಕಟ್ಟಡಗಳಲ್ಲಿ ಚಿಕ್ಕಮಕ್ಕಳಿಗೆ ಓದು ಕಲಿಸಲಾಗುತ್ತಿದೆ. ಇವುಗಳ ರೋದನಕ್ಕೆ ಕಿವಿ ಕೊಡುವವರೇ ಇಲ್ಲವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಪುಸ್ತಕ ಮಾರಾಟದಿಂದ ಲಭ್ಯವಾಗುವ ನೂರಿನ್ನೂರು ರೂಪಾಯಿಗಳಿಂದ ಶಾಲೆ ಕೋಣೆಗಳ ಉದ್ಧಾರವಾಗಲು ಸಾಧ್ಯವಿದೆಯೇ ? ರಘುಪತಿಯವರು ಕೆಲವು ಶಾಲೆಗಳಿಗೆ ಸಂದರ್ಶನ ನೀಡುವುದು ಅತ್ಯಗತ್ಯ. ಈಗಿರುವ ದನಗಳ ಕೊಟ್ಟಿಗೆಯಿಂದ ಮಕ್ಕಳನ್ನು ಬಿಡುಗಡೆ ಮಾಡುವ ತೀವ್ರಕ್ರಮ ಉಳಿದೆಲ್ಲ ಕಾರ್ಯಗಳಿಗಿಂತಲೂ ಅತಿ ತುರ್ತಿನದೆಂದು ಹೇಳಲೇ ಬೇಕಾಗುತ್ತದೆ.

ಅಜೀಜ ಶೇಟರ ಅಂತರ್ಲಾಗ

ಮುಸಲ್ಮಾನರ, ಅಲ್ಪಮತಸ್ಥರ ಹಿತ ರಕ್ಷಕರೆಂದು ಪ್ರತಿಪಾದಿಸುತ್ತಿರುವ ಅಜೀಜ ಶೇಠರು ಅಧಿಕಾರಕ್ಕಾಗಿ ಅಂಟಿಕೊಳ್ಳಲು ಏನೆಲ್ಲ ಮಾಡಬೇಕೋ ಅದನ್ನೆಲ್ಲ ನಾಚಿಕೆ ಬಿಟ್ಟು ಮಾಡಿಕೊಂಡು ಹೊರಟಿದ್ದಾರೆ. ಸಮಾಜ ಅಂಥವರಿಗೆ ಬಹಿಷ್ಕಾರ ಹಾಕಿ, ಬುದ್ಧಿ ಕಲಿಸುವುದು ಅತ್ಯಗತ್ಯ.

ಸ್ವಾತಂತ್ರ್ಯ ಪೂರ್ವ ಹಾಗೆಯೇ ಕೆಲವು ಕಾಲ ಅನಂತರ ಸೋಶಲಿಸ್ಟ ಪಕ್ಷದಲ್ಲಿದ್ದ ಅಜೀಜ ಶೇಠರು ಕಾಂಗ್ರೆಸ್ಸು ಸೇರಿದ್ದರು. ಅನಂತರ ಕ್ರಾಂತಿರಂಗಕ್ಕೆ ಬಂದರು. ಕ್ರಾಂತಿರಂಗದಿಂದ ಜನತಾ ಸರಕಾರದಲ್ಲಿ ಮಂತ್ರಿಗಳಾದರು. ಜನತಾ ಬಿಟ್ಟು ಇಷ್ಟು ದಿವಸ ಸ್ವತಂತ್ರರಾಗಿಯೇ ಉಳಿದು ಈಗ ಕಾಂಗೈ ಪಕ್ಷ ಸೇರಿದ್ದಾರೆ. ತಾವು ಹೆಗಡೆ ಸರಕಾರಕ್ಕೆ ರಾಜೀನಾಮೆ ಇತ್ತಾಗ ಚಂದ್ರಪ್ರಭಾ ಅರಸರನ್ನು ತಮ್ಮ ಜೊತೆಯಲ್ಲಿ ಕರಕೊಂಡಿದ್ದರು. ಇನ್ನೂ ಕೆಲವರು ತಮ್ಮನ್ನು ಹಿಂಬಾಲಿಸ ಬಹುದೆಂದು ಆಶಿಸಿದ್ದರು ಕಾಂಗೈಯ ಕೆಲವು ಮುಖಂಡರನ್ನು

(7ನೇ ಪುಟ ನೋಡಿ)

ಇಂದಿರಾ ಕೊಲೆ ಬಗ್ಗೆ ಅತೀವ ಪ್ರಚಾರವೇಕೆ ?

– ಎನ್. ಕೆ. ಉಪಾಧ್ಯಾಯ

“ಕಳೆದ ಹನ್ನೆರಡು ದಿವಸಗಳಿಂದ ಇಂದಿರಾ ಗಾಂಧಿಯ ಕೊಲೆಯ ಬಗ್ಗೆ ದೂರದರ್ಶನ, ಆಕಾಶವಾಣಿ ಹಾಗೆಯೇ ಬಂಡವಾಳಶಾಹಿ ಪತ್ರಿಕೆಗಳು ಒಂದೇ ಸಮನೆ ನಡೆಸುತ್ತಿರುವ ಪ್ರಚಾರದಿಂದಾಗಿ ನನ್ನ ಮೆದುಳಿನ ವಿಚಾರ ಮಾಡುವ ಶಕ್ತಿಯನ್ನೇ ಕಳೆದುಕೊಂಡಂತಾಗಿದೆ”ಂದು ಹಲವಾರು ಜನ ಒಬ್ಬ ವ್ಯಕ್ತಿಯ ದುರ್ಮರಣದ ಕುರಿತು ಕಾಂಗ್ರೆಸ್ ಸರಕಾರ, ಅದರ ಪ್ರಚಾರ, ಶಾಖೆ ನಡೆಸುತ್ತಿರುವ ಪ್ರಚಾರ ಮತ್ತು ಸುದ್ದಿ ಬಿತ್ತರಣೆ ಕುರಿತು ಅಭಿಪ್ರಾಯ ವ್ಯಕ್ತಮಾಡಿದ್ದಾರೆ. ಭಾರತ ದೇಶ ಒಂದನ್ನು ಬಿಟ್ಟರೆ ಬೇರೆ ಯಾವ ದೇಶದಲ್ಲಿಯೂ, ಸಾಮ್ರಾಜ್ಯಶಾಹಿ ದೇಶಗಳಲ್ಲಿ ಕೂಡ – ಈ ತರದ ಪ್ರಚಾರ ನಡೆಯುತ್ತಿಲ್ಲೆಂದು ಸ್ಪಷ್ಟ ಹೇಳಬೇಕಾಗುತ್ತದೆ.

ಇಂದಿರಾ ಫೋಟೋಗಳನ್ನಿಟ್ಟು ದೇಶದ ಪ್ರತಿಯೊಂದು ಹಳ್ಳಿಗಳಲ್ಲಿಯೂ ಮೂಲೆ ಮೂಲೆಯಲ್ಲೂ ಕಾಂಗ್ರೆಸ್ ಮುಖಂಡರು ಇಂದಿರಾ ಸಾವಿನ ಲಾಭ ಪಡೆಯಲು ಪ್ರಯತ್ನ ನಡೆಸಿದ್ದಾರೆ. ಅದೇ ಸಮಯದಲ್ಲಿ ಪಶ್ಚಿಮ ಬಂಗಾಳ ಮತ್ತಿತರ ಕಾಂಗ್ರೆಯೇತರ ರಾಜ್ಯಗಳಲ್ಲಿ ಶಾಂತಿಗಾಗಿ ನಡೆಸುತ್ತಿರುವ ಪ್ರಯತ್ನಗಳನ್ನೂ ಚಟುವಟಿಕೆಗಳನ್ನೂ ತಮ್ಮ ಪ್ರಚಾರ ಮಾಧ್ಯಮದಿಂದ ದೂರೀಕರಿಸಲಾಗುತ್ತಿದೆ. ಹಾಗಾದರೆ ಇದರ ಗುಟ್ಟೇನು ?

1969ರಲ್ಲಿ ಕಾಂಗ್ರೆಸ್ ವಿಭಜನೆಯಾದಂದಿನಿಂದ ತನ್ನ ಕಾಂಗ್ರೆಸ್ಸಿಗೆ ಇಂದಿರಾ ಕಾಂಗ್ರೆಸ್ ಎಂದು ನಾಮಕರಣಮಾಡಿ ತನ್ನ ವ್ಯಕ್ತಿ ಪ್ರಭಾವದಿಂದಲೇ ಚುನಾವಣೆಗಳಲ್ಲಿ ಗೆದ್ದು, ಆಡಳಿತ ನಡೆಸಿಕೊಂಡು ಬರುವ ಪ್ರವೃತ್ತಿಯನ್ನು ಇಂದಿರಾಗಾಂಧಿ ಅನುಸರಿಸುತ್ತಿದ್ದರು. ರಾಜ್ಯ ಚುನಾವಣೆಗಳಲ್ಲಿ ಕೂಡಾ ಕಾಂಗ್ರೆಸ್ ಉಮೇದುವಾರರು ಯಾರೇ ಇರಲಿ “ಇಂದಿರಾ ಗಾಂಧಿಗೆ ನಮ್ಮ ಮತ” ವೆಂದು ಸಾರಿ ಕಾಂಗ್ರೆಸು ಆರಿಸಿ ಬರುತ್ತಿತ್ತು. ಪ್ರಜಾಪ್ರಭುತ್ವವನ್ನು ಕಡೆಗಣಿಸಿ ತನಗೆ ಬೇಕಾದಂಥ ವ್ಯಕ್ತಿಗಳನ್ನೇ ಮುಖ್ಯಮಂತ್ರಿಯನ್ನಾಗಿ ನೇಮಿಸುವ ಪರಿಪಾಠ ಅನುಸರಿಸಿ, ತನ್ನ ಹಿಡಿತವನ್ನು ಪಕ್ಷದಲ್ಲೂ ಆಡಳಿತೆಯಲ್ಲೂ ದೃಢೀಕರಿಸಿಕೊಂಡು ಆಡಳಿತೆಯನ್ನೂ ಸಂಘಟನೆಯನ್ನೂ ನಡೆಸಿಕೊಂಡು ಬಂದಿದ್ದರು.

ಇಂದಿರಾ ಮರಣದಿಂದಾಗಿ ಆಡಳಿತ — ಸಂಘಟನೆಗಳೆರಡಲ್ಲೂ ಶೂನ್ಯ ಮೂಡಿ ಬಂದಂತಾಗಿದೆ. ಅದನ್ನು ತುಂಬಿಕೊಳ್ಳಲು ಈ ರೀತಿಯ ಪ್ರಚಾರ ನಡೆಯುತ್ತಿದೆಂದರೆ ತಪ್ಪೇನಲ್ಲ.

ಸರಕಾರದ ಪ್ರಚಾರ ಮಾಧ್ಯಮಗಳಾದ ದೂರದರ್ಶನ ಆಕಾಶವಾಣಿಗಳನ್ನು ಒಬ್ಬ ವ್ಯಕ್ತಿಯ ಪ್ರಚಾರದ ಸಲುವಾಗಿ ಈ ರೀತಿ ದುರುಪಯೋಗಪಡಿಸಿಕೊಳ್ಳುವುದು, ಚಿತಾಭಸ್ಮವನ್ನು ಪ್ರತಿಯೊಂದು ರಾಜ್ಯಕ್ಕೆ ಕಳುಹಿಸಿ ಅದಕ್ಕಾಗಿ ವಿಶೇಷ ವಿಮಾನ, ರೈಲುಗಳಿಗಾಗಿಯೂ, ಆ ಭಸ್ಮವನ್ನು ಹಿಮಾಲಯದಲ್ಲಿ ಸಿಂಪಡಿಸಲಿಕ್ಕೂ ಮಾಡಿದ ಖರ್ಚು ಮತ್ತು ರೀತಿ ಕಾಂಗ್ರೆಸ್ ಆಡಳಿತೆಯ ವೈಖರಿಯನ್ನೂ ಅದರ ನಿಶಕ್ತತೆಯನ್ನೂ ತೋರಿಸಿಕೊಡುತ್ತದೆ.

ಬೃಹತ್ ಸಮತಾವಾದಿ ದೇಶಗಳಾದ ರಷ್ಯ – ಚೀನಗಳಲ್ಲಿಯೇ ಆಗಲಿ ಅಥವ ಇತರ ಯಾವುದೇ ಸಮತಾವಾದಿ ದೇಶದಲ್ಲೇ ಆಗಲೀ ಆಯಾ ದೇಶದ ಅಧ್ಯಕ್ಷ - ಪ್ರಧಾನ ಮಂತ್ರಿಗಳು ಮೃತರಾದಾಗ ಈ ರೀತಿಯ ಪ್ರಚಾರ ವೈಖರಿಯಾಗಲೀ, ಕಚೇರಿ ಕಾರ್ಖಾನೆಗಳಿಗೆ ರಜೆಕೊಟ್ಟು ಆಡಳಿತೆ, ಉತ್ಪಾದನೆ ಸ್ಥಗಿತಗೊಳಿಸುವುದಾಗಲೀ ನಡೆಯುವುದಿಲ್ಲ. ಅಲ್ಲಿ ಅಗಲಿದ ಮುಖಂಡರಿಗೆ ಶ್ರದ್ಧಾಂಜಲಿಯನ್ನರ್ಪಿಸುವ ಪದ್ಧತಿಯೇ ಬೇರೆ. ಒತ್ತಾಯದಿಂದ ಅಂಗಡಿಗಳನ್ನೂ, ದಿನದ ವ್ಯವಹಾರಗಳನ್ನೂ ನಿಲ್ಲಿಸಿ ಜನರಿಗೆ ಅನಾನುಕೂಲತೆ ಮಾಡಿ, ಕಚೇರಿ ಕಾರ್ಖಾನೆಗಳನ್ನು ಮುಚ್ಚಿ ಉತ್ಪಾದನೆಗೆ ಹಾನಿ ಉಂಟು ಮಾಡಿ ದುಃಖ ಸಂತಾಪ ಪ್ರದರ್ಶಿಸುವುದಿಲ್ಲ. ಆ ದೇಶದಲ್ಲಿ ದಿನ ನಿತ್ಯದ ವ್ಯವಹಾರ ಆತಂಕವಿಲ್ಲದೇ ನಡೆದಿರುತ್ತವೆ. ಮುಖಂಡರ ಮೃತದೇಹವನ್ನು ಚಿತೆಗೇರಿಸಿದಾಗ ಮಾತ್ರ ಇಡೀ ಜನತೆ ತಾವು ಕೆಲಸ ಮಾಡುತ್ತಿದ್ದಲ್ಲಿಯೇ ಐದು ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿಯನ್ನರ್ಪಿಸುತ್ತಾರೆ. ಅದು ಸಮತಾವಾದಿ ರಾಷ್ಟ್ರಗಳ ಜನರ ರೀತಿ, ನಮ್ಮದು ಬಂಡವಾಳಶಾಹಿ ಸರಕಾರದ ಸಮಾಜದ ವೈಖರಿ.

ಸಮಾಜದಲ್ಲಿ ಮೂಡಿ ನಿಂತಿರುವ ಮೂಢ ನಂಬಿಕೆಯ ಸಂಪೂರ್ಣ ಲಾಭವನ್ನು ಆಳುವ ಕಾಂಗ್ರೆಸ್ ಸರಕಾರ ಹಾಗೂ ಪಕ್ಷ ಉಪಯೋಗ ಮಾಡಿಕೊಳ್ಳುತ್ತಿದೆ. ಇಂದಿರಾ ಜೊತೆಯಲ್ಲೆ ಪಕ್ಷದ ಆತ್ಮವೂ ಹಾರಿಹೋಗುತ್ತಿದೆ. ಅದನ್ನು ಉಳಿಸದಿದರ್ದೆ ತಮ್ಮ ಪಕ್ಷ ನಿರ್ವೀರ್ಯವಾದಂತೆಯೇ ಸರಿ. ಪಕ್ಷದ ಉಳಿಯುವಿಕೆಯ ಸಲುವಾಗಿ ಸಾಧ್ಯವಾದಷ್ಟು ದಿವಸ ಆತ್ಮವನ್ನು ಅಂದರೆ ಇಂದಿರಾ ಪ್ರಚಾರವನ್ನು ಜೀವಂತ ಉಳಿಸಬೇಕೆಂಬುದೇ ಅವರ ಮುಖ್ಯ ಉದ್ದೇಶವಾಗಿದೆ.

ಸರಕಾರದ ಪ್ರಚಾರ ಮಾಧ್ಯಮದ ಕಾರ್ಯ ಪದ್ಧತಿಯ ಕುರಿತು ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಜ್ಯೋತಿ ಬಸು ಅವರು ಕೇಂದ್ರ ಸರಕಾರದ ಪ್ರಚಾರ ಶಾಖೆಯ ಮಂತ್ರಿಯವರಿಗೆ ದೂರಿತ್ತಿದ್ದಾರೆ. ದೇಶದ ಐಕ್ಯತೆ ಮತ್ತು ಜಾತೀಯ ಸೌಹಾರ್ದತೆಯ ಸಲುವಾಗಿ ಕಲ್ಕತ್ತದಲ್ಲಿ ನಡೆದಂಥ ಕಾರ್ಯಕ್ರಮದ ಅತಿ ಮಹತ್ವದ ಸುದ್ದಿಯೊಂದನ್ನು ಪ್ರಕಟಿಸುವುದರಲ್ಲಿ ವಿಫಲಗೊಂಡದ್ದಕ್ಕಾಗಿ ಜ್ಯೋತಿ ಬಸು ಅವರು ಆಕಾಶವಾಣಿ ದೂರದರ್ಶನಗಳನ್ನು ಕಟುವಾಗಿ ಟೀಕಿಸಿದ್ದಾರೆ.

ಇಂದಿರಾ ಗಾಂಧಿಯ ಕೊಲೆಯಾದ ಕೂಡಲೇ ದೇಶದ ನಾನಾ ಭಾಗಗಳಲ್ಲಿ ದೊಂಬಿ ನಡೆದು ಇಡೀ ದೇಶವೆ ಗಂಭೀರ ಪರಿಸ್ಥಿತಿಯನ್ನೆದುರಿಸುತ್ತಿದ್ದಾಗ ಪಶ್ಚಿಮ ಬಂಗಾಲದಲ್ಲಿ ಶಾಂತಿ, ಜಾತೀಯ ಸೌಹಾರ್ದತೆಯನ್ನುಳಿಸಿಕೊಳ್ಳುವ ಸಲುವಾಗಿ ಸಾರ್ವಜನಿಕ ಅಭಿಪ್ರಾಯ ಉಂಟು ಮಾಡಲು ತಾನು ಮತ್ತು ತನ್ನ ಮಂತ್ರಿ ಮಂಡಲದ ಸದಸ್ಯರೆಲ್ಲ ಪಾಲ್ಗೊಂಡು ಅರ್ಧ ಲಕ್ಷಕ್ಕೂ ಮೇಲ್ಪಟ್ಟು ಜನ ಭಾಗವಹಿಸಿದ್ದ ಪ್ರಚಂಡ ಶಾಂತಿ ಮೋರ್ಚಾವನ್ನು ನವಂಬರ್ 6 ರಂದು ಏರ್ಪಡಿಸಲಾಗಿತ್ತೆಂದೂ, ಆದರೆ ಇಂಥ ಮುಖ್ಯ ವಿಷಯವನ್ನು ದೂರದರ್ಶನದಲ್ಲಿ ತೋರಿಸದೆ ಆಕಾಶವಾಣಿಯಲ್ಲಿ ಬಿತ್ತರಿಸದೆ, ಅದೇ ದಿವಸ ಕಾಂಗ್ರೆಸ್ಸಿನವರು ಹೊರಡಿಸಿದ್ದ ದೊಡ್ಡದಲ್ಲದ ಮೆರವಣಿಗೆ–ಸಭೆಗಳಿಗಷ್ಟೇ ಪ್ರಚಾರಕೊಟ್ಟಿರುವುದನ್ನು ಜ್ಯೋತಿಬಸು ಅವರು ಆಕ್ಷೇಪಿಸಿದ್ದಾರೆ. ಅಷ್ಟೇ ಅಲ್ಲದೆ ಕೇಂದ್ರದ ಸುದ್ದಿ ಮತ್ತು ಪ್ರಚಾರ ಶಾಖೆಯನ್ನೂ, ಮಾಧ್ಯಮವನ್ನು ಸರಿಪಡಿಸಬೇಕಾದ ಅವಶ್ಯಕತೆಯ ಕಡೆ ಮಂತ್ರಿಯವರ ಗಮನ ಸೆಳೆದಿದ್ದಾರೆ. ದೇಶದ ಇತರೆಡೆಗಳಲ್ಲಿ ಹಾಗೂ ಸ್ವತಃ ದಿಲ್ಲಿಯಲ್ಲಿ ಜನ–ಆಸ್ತಿಗಳಿಗೆಲ್ಲ ದೊಂಬಿ-ಲೂಟಿಗಳಿಂದಾಗಿ ಅಪಾರ ಹಾನಿಯಾಗುತ್ತಿರುವಾಗ, ಕಲ್ಕತ್ತ ನಗರ ಹಾಗೂ ಇಡೀ ಪಶ್ಚಿಮ ಬಂಗಾಲದಲ್ಲಿ ಪರಿಸ್ಥಿತಿ ಸುಧಾರಿಸಿರುವುದನ್ನೂ ಬೇರೆ ಬೇರೆ ಜಾತಿ–ಧರ್ಮೀಯರಲ್ಲಿ ವಿಶ್ವಾಸ ಉಂಟು ಮಾಡಿರುವುದನ್ನು ಎಲ್ಲ ಮಾಧ್ಯಮಗಳಲ್ಲಿ ಪ್ರಚಾರ ಮಾಡುವ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. “ದೂರದರ್ಶನ ಮತ್ತು ಆಕಾಶವಾಣಿಯ ಅಧಿಕಾರಿಗಳ ವರ್ತನೆ ದೇಶದ ಹಿತದ ದೃಷ್ಟಿಯಿಂದ ಅಪಾಯಕಾರಿಯಾಗಿದೆಂದು” ಬಸು ಅವರು ತಾವು ಕೇಂದ್ರ ಮಂತ್ರಿಯವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಒಬ್ಬ ಪ್ರಧಾನಿಯು ಕೊಲೆಯಾದಾಗ ಜನರಿಗೂ–ಆಸ್ತಿಪಾಸ್ತಿಗೂ ಆಗಬಹುದಾದ ಹಾನಿಯ ಕುರಿತು ಸರಕಾರ ಪೂರ್ವಭಾವಿಯಾಗಿಯೇ ವಿಚಾರ ಮಾಡುವುದು, ಜನರಿಗೆ ರಕ್ಷಣೆ ನೀಡುವುದು ಅಗತ್ಯದ ಕರ್ತವ್ಯವಾಗಿರುತ್ತದೆ.

ಆದರೆ ಇಂದಿರಾ ಗಾಂಧಿ ಸತ್ತಾಗ ಕೇಂದ್ರದ ಹಾಗೆಯೇ ಕಾಂಗ್ರೆಸ್ ಅಧಿಕಾರ ನಡೆಸುತ್ತಿರುವ ರಾಜ್ಯಗಳಲ್ಲಿ ಸಿಖ್ ಜನರ, ಅವರ ಆಸ್ತಿಪಾಸ್ತಿಯ ರಕ್ಷಣೆ ಮಾಡಲು ಯಾಕೆ ಸಾಧ್ಯವಾಗಲಿಲ್ಲ ಗೊತ್ತೇ ? ಬೇಲಿಯೇ ಹೊಲ ಮೈದರೆ ಹೇಗಾದೀತು ? ಅದನ್ನೇ ದೇಶದಲ್ಲಿ ಕಂಡಿರುವುದು.

ಇಂದಿರಾ ಗಾಂಧಿಯ ಕೊಲೆಯಿಂದಾಗಿ ಉಂಟಾದ ದೊಂಬಿ, ಲೂಟಿ, ಹತ್ಯೆಗಳಲ್ಲೆಲ್ಲ ಇಂದಿರಾ ಕಾಂಗ್ರೆಸ್ಸಿನವರ ಕೈವಾಡವಿದೆಂದು, ಇಂದಿರಾ ಗಾಂಧಿಯ ಕೊಲೆ ಸಿಖ್‌ರಿಂದ ಆಗಿರುವುದರಿಂದ ಸಿಖ್ ಸಮಾಜದ ಮೇಲೆ ಪ್ರತೀಕಾರ ವೆಸಗಬೇಕೆಂದು ಕಾಂಗ್ರೆಸ್ಸಿನವರೇ ಹತ್ಯಾಕಾಂಡ, ಲೂಟಿ ನಡೆಸಿದ್ದಾರೆಂದು ಭಾ.ಜ.ಪ. ಅಧ್ಯಕ್ಷ ವಾಜಪಾಯಿ ಮತ್ತು ದ.ಮು.ಕ. ಪಕ್ಷದ ಮುಖಂಡರು ಆರೋಪ ಹೊರಿಸಿದ್ದಾರೆ. ಇದರಲ್ಲಿ ತಥ್ಯಾಂಶವಿಲ್ಲದಿಲ್ಲ. ಕೆಲವು ತಿಂಗಳ ಹಿಂದೆ ಕಾಂಗ್ರೆಸ್ ಘೋಷಿತ ರಾಷ್ಟ್ರೀಯ ವಿದ್ಯಾರ್ಥಿ ಸಂಘಟನೆಯ ಸಮಾವೇಶ ನಾಗಪುರದಲ್ಲಿ ನಡೆದಾಗ ಕಾಂಗ್ರೆಸ್ ಯುವಕರ ಕೃತಿ ಇಡೀ ದೇಶದ ಜನರ ಮುಖಕ್ಕೆ ಮಸಿಬಳಿಯುವಂತಾಗಿತ್ತು. ಆದರೆ ಇಂದಿರಾಗಾಂಧಿ, ರಾಜೀವ ಗಾಂಧಿಯವರು ತಮ್ಮ ಪಕ್ಷದ ಯುವಕರ ಸಮಾಜದ್ರೋಹಿ ಕೃತ್ಯಗಳನ್ನು ಸಮರ್ಥಿಸಿ, ಅವೆಲ್ಲ ವಿರೋಧ ಪಕ್ಷದವರ ಕೈವಾಡವೆಂದು ಹೇಳಿರುವುದು ಇಂಥ ಕೃತ್ಯಗಳಿಗೆ ಪುಷ್ಟಿ ಕೊಟ್ಟಂತಾಗಿದೆ. ಕಾಂಗ್ರೆಸ್ ಜನರ ಇಂಥ ಸಮಾಜದ್ರೋಹ ಕಾರ್ಯಗಳಲ್ಲಿ ಪೋಲೀಸರೂ, ಪೋಲೀಸ್ ಅಧಿಕಾರಿಗಳೂ, ಗುಂಡಾ ಜನರೂ ಶಾಮೀಲಾಂಗಿದ್ದಾರೆಂಬುದು ಸ್ಪಷ್ಟ.

ಮಧ್ಯ ಪ್ರದೇಶದಿಂದ ಬಂದ ವರದಿ ಪ್ರಕಾರ ಕೇಂದ್ರದ ಕ್ಯಾಬಿನೆಟ್ ಮಂತ್ರಿಯಾದ ಪಿ. ಸಿ. ಸೇಠಿಯವರನ್ನು (ಅವರು ಇಂದೋರ್–ನಗರದವರು) ರಾಜೀವಗಾಂಧಿ ರಚಿಸಿದಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳದಿರುವುದನ್ನು ಪ್ರತಿಭಟಿಸಿ ಇಂದೋರನ್ನೊಳಗೊಂಡು ಈ

(6ನೇ ಪುಟ ನೋಡಿ)

ರುದ್ರ ವೀಣೆ

ಯಾಕೋ ಕಾಣೆ
ರುದ್ರ ವೀಣೆ
ಮಿಡಿಯುತಿರುವುದು
ಜೀವದಾಣೆ –
ಯಂತೆ ತಾನೆ
ನುಡಿಯುತಿರುವುದು

ತಂತಿ ಮಿಂಚಿ ನಡುಗುತಿವೆ
ಸೊಲ್ಲು ಸಿಡಿದು ಗುಡುಗುತಿವೆ
ಮಿಡಿವ ಬೆರಳು ಅಡಗುತಿವೆ
ಮುಗಿಲ ಬಯಲಲಿ

ಚಿಕ್ಕೆ ಬಾಲ ಬೀಸುತಿವೆ
ಸೂರ್ಯ ಚಂದ್ರ ಈಸುತಿವೆ
ಹೊಸ ಬೆಳಕಿಗೆ ಹಾಸುತಿವೆ
ಕಾಲ ಪಥದಲಿ

ನೆಲದ ಬಸಿರೊಳುರಿಯುತಿದೆ
ಬೆಟ್ಟ ದೆದೆಯು ಬಿರಿಯುತಿದೆ
ನೀರು ಮೀಟಿ ಹರಿಯುತಿದೆ
ಕೆಂಪು ನೆಲದಲಿ

ಧರ್ಮಾಸನ ಹೊರಳುತಿವೆ
ಸಿಂಹಾಸನ ಉರುಳುತಿವೆ
ಜಾತಿ ಪಂಥ ತೆರಳುತಿವೆ
ಮನದ ಮರೆಯಲಿ

ಯಾಕೋ ಕಾಣೆ ರುದ್ರ ವೀಣೆ
ಮಿಡಿಯುತ್ತಿರುವುದು
ಜೀವದಾಣೆಯಂತೆ ತಾನೆ
ನುಡಿಯುತ್ತಿರುವುದು.

— ಡಾ॥ ದ. ರಾ. ಬೇಂದ್ರೆ

ಕಾಂಗ್ರೆಸ್ ಸಮಾಜವಾದೀ ಪಕ್ಷ ಮತ್ತು ಕಮ್ಯುನಿಸ್ಟರು

ಈ ಒಪ್ಪಂದ ಕಾರ್ಮಿಕ ಆಂದೋಲನದ ಏಕೀಕರಣದಲ್ಲಿ ಕಿಸಾನ್ ಹಾಗೂ ವಿದ್ಯಾರ್ಥಿ ಆಂದೋಲನಗಳನ್ನು ಬೆಳೆಸುವುದರಲ್ಲಿ ನೆರವಾಗುವುದರ ಮೂಲಕ ದ್ವಿತೀಯ ಮಹಾಯುದ್ಧದ ಆರಂಭದ ಸ್ವಲ್ಪ ಮೊದಲು ದೇಶದಲ್ಲಿ ಬೃಹತ್ ಪ್ರಮಾಣದಲ್ಲಿ ಸಾಮ್ರಾಜ್ಯಶಾಹೀ-ವಿರೋಧೀ ಆಂದೋಲನ ಬೆಳೆದು ಬರುವಲ್ಲಿ ದೊಡ್ಡ ಪಾತ್ರ ವಹಿಸಿತು. ಅಷ್ಟೇ ಅಲ್ಲ, ಕಾಂಗ್ರೆಸ್‌ನೊಳಗೇ ಹಲವಾರು ಕಾಂಗ್ರೆಸ್ಸಿಗರನ್ನು ತೀವ್ರಗಾಮಿಗಳನ್ನಾಗಿಸಿ ಆ ಪಕ್ಷದ ಬಲಪಂಥೀಯ ನಾಯಕತ್ವದ ಹಿಡಿತವನ್ನು ದುರ್ಬಲಗೊಳಿಸುವಲ್ಲಿ ಕೂಡಾ ಈ ಒಪ್ಪಂದ ಸಹಾಯಕವಾಯಿತು. ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯಲ್ಲಿ ಮಹಾತ್ಮಾಗಾಂಧಿಯವರ ಅಭ್ಯರ್ಥಿಯ ಸೋಲು [ಇದು ಸ್ವತಃ ತನ್ನದೇ ಸೋಲು ಎಂದಿದ್ದರು ಗಾಂಧೀಜಿ] ಎಡಪಂಥೀಯರ ಈ ಬೆಳೆಯುತ್ತಿದ್ದ ಒಗ್ಗಟ್ಟಿನ ಉಚ್ಛ್ರಾಯಬಿಂದು ಎರಡು ವರ್ಷಗಳ ಕಾಲ ನೆಹರೂ, ಒಂದು ವರ್ಷ ಸುಭಾಸ್ ಬೋಸ್ ಕಾಂಗ್ರೆಸ್ ಅಧ್ಯಕ್ಷರುಗಳಾಗಿದ್ದು ನೀಡಿದ ವಿವಿಧ ಹೇಳಿಕೆಗಳು ಅವರಿಬ್ಬರ ವೈಯಕ್ತಿಕ ಅಭಿಪ್ರಾಯ ಮಾತ್ರವಲ್ಲ, ಕಾಂಗ್ರೆಸ್ಸಿನ ಒಳಗೆ ಹಾಗೂ ಹೊರಗೆ ಇದ್ದ ಸಮಸ್ತ ಎಡಪಂಥೀಯರ ದೃಷ್ಟಿಕೋನವನ್ನು ಅದು ಪ್ರತಿಫಲಿಸುತ್ತಿತ್ತು.

ಇಂತಹ ಒಂದು ವ್ಯಾಪಕ ಒಪ್ಪಂದ ಸಾಧ್ಯವಾದದ್ದು ಜಾಗತಿಕ ರಾಜಕೀಯದಲ್ಲಿ ಸಮಾಜವಾದ ಮತ್ತು ಬಂಡವಾಳಶಾಹಿಯ ನಡುವಿನ, ಶಾಂತಿ ಮತ್ತು ಯುದ್ಧದ ನಡುವಿನ ಯುಗಾಂತರಕಾರೀ ಹೋರಾಟದಿಂದಾಗಿ. ಇದರಿಂದ ಪ್ರೇರಿತರಾದ ಕೆಲವು ಕಾಂಗ್ರೆಸ್ಸಿಗರು ಸಮಾಜವಾದದತ್ತ ಆಕರ್ಷಿತರಾದರೆ, ಅದಾಗಲೇ ಕಮ್ಯುನಿಸ್ಟರು, ಸಮಾಜವಾದಿಗಳಾಗಿದ್ದವರು ತಮ್ಮ ಕಾರ್ಯವ್ಯಾಪ್ತಿಯನ್ನು ಬೆಳೆಸಿಕೊಳ್ಳಲಾರಂಭಿಸಿದರು. ಸಿ.ಎಸ.ಪಿ. ಇದೇ ಪ್ರಕ್ರಿಯೆಗೆ ಮೂರ್ತರೂಪ ಕೊಟ್ಟು ಭ್ರಮ ನಿರಸನ ಹೊಂದಿದ ಕಾಂಗ್ರೆಸ್ಸಿಗರಿಗೆ ಕಾಂಗ್ರೆಸ್ಸಿನ ಹೊರಗಿದ್ದ ಕಮ್ಯುನಿಸ್ಟರು ಹಾಗೂ ಇತರ ಎಡಪಂಥೀಯರೊಂದಿಗೆ ಜಂಟೀ ಕಾರ್ಯಾಚರಣೆ ಸಂಘಟಿಸಲು ಅನುವು ಮಾಡಿ ಕೊಟ್ಟ ವೇದಿಕೆಯಾಯಿತು; ತನ್ಮೂಲಕ ಒಂದು ಶಕ್ತಿಶಾಲೀ ಸಾಮ್ರಾಜ್ಯಶಾಹೀ-ವಿರೋಧೀ ಐಕ್ಯರಂಗ ಮೂಡಿ ಬರುವಲ್ಲಿ ನೆರವಾಯಿತು.

ವ್ಯಾಪಕ ಭಿನ್ನಾಭಿಪ್ರಾಯ

ಆದರೆ ಈ ಕೆಲಸ ಸುಲಭದ್ದೇನೂ ಆಗಿರಲಿಲ್ಲ. ಯಾಕೆಂದರೆ ವಿವಿಧ ಎಡಪಂಥೀಯ ಗುಂಪುಗಳು ಹಾಗೂ ಪಕ್ಷಗಳ ನಡುವಿನ ಭಿನ್ನಾಭಿಪ್ರಾಯಗಳೂ ವ್ಯಾಪಕವಾಗಿದ್ದವು-ವಿಶೇಷವಾಗಿ ಕಮ್ಯುನಿಸ್ಟರು, ಕಾಂಗ್ರೆಸ್ ಸಮಾಜವಾದಿಗಳು ಹಾಗೂ ಇತರ ತೀವ್ರಗಾಮೀ ಕಾಂಗ್ರೆಸ್ಸಿಗರ ನಡುವೆ.

ಕಾಂಗ್ರೆಸ್ ಸಮಾಜವಾದೀ ಪಕ್ಷಕ್ಕೆ ಅದರ ಹೆಸರೇ ಸೂಚಿಸುವಂತೆ ಸಮಾಜವಾದ ಎಂದರೆ ಕಾಂಗ್ರೆಸ್ ಪಕ್ಷದ ಗಾಂಧೀವಾದೀ, ನೆಹರೂ ವಾದೀ ಇತ್ಯಾದಿ ತತ್ತ್ವಗಳ ವಿಸ್ತರಣೆ ಮಾತ್ರವಾಗಿತ್ತು; ಎಡಪಂಥೀಯ ಕಾಂಗ್ರೆಸ್ಸಿಗರಿಗೆ ಅದು ಕಾಂಗ್ರೆಸ್ಸಿನ ಲಾಹೋರ್ ಹಾಗೂ ಕರಾಚಿ ಅಧಿವೇಶನಗಳ ಠರಾವುಗಳ ಬೆಳವಣಿಗೆಗಳಾಗಿತ್ತಷ್ಟೆ.

ಆದರೆ ಕಮ್ಯುನಿಸ್ಟರು ಆರಂಭದಿಂದಲೇ ಕಾರ್ಮಿಕ ವರ್ಗದ ಜಾಗತಿಕ ದೃಷ್ಟಿ, ಹೋರಾಟದ ಮತ್ತು ಸಂಘಟನೆಯ ತಂತ್ರ ಹಾಗೂ ಕಾರ್ಯವ್ಯೂಹಗಳನ್ನು ಭಾರತದ ಮೂರ್ತ ಪರಿಸ್ಥಿತಿಗಳಿಗೆ ಅನ್ವಯಿಸಲು ಪ್ರಯತ್ನಿಸುತ್ತಿದ್ದವರು. "1930ರಲ್ಲಿ ಪಕ್ಷ ರೂಪಿಸಿದ ಕರಡು ಕಾರ್ಯಕ್ರಮ" ಕೈಗಾರಿಕಾ ಪ್ರಕ್ರಿಯೆಯಿಂದಲೇ ಸಂಘಟಿತಗೊಂಡಿರುವ ಭಾರತದ ಕಾರ್ಮಿಕ ವರ್ಗ ವರ್ಗ ಹೋರಾಟದ ಮೂಲಕ, ಕಮ್ಯುನಿಸ್ಟ ಮುಂದಳದ ನಾಯಕತ್ವದಲ್ಲಿ ಚದುರಿ ಹೋಗಿರುವ ರೈತಾಪಿ ವರ್ಗ ಹಾಗೂ ಪಟ್ಟಣದ ಬಡವರನ್ನು ಬ್ರಿಟಿಶ್ ಪ್ರಾಬಲ್ಯದ ವಿರುದ್ಧ ಹಾಗೂ ಭೂಮಾಲಕತ್ವದ ವಿರುದ್ಧ ಹೋರಾಟಕ್ಕಾಗಿ ಸಂಘಟಿಸುವ ತನ್ನ ಚಾರಿತ್ರಿಕ ಕರ್ತವ್ಯವನ್ನು ನೆರವೇರಿಸುತ್ತದೆ" ಎಂದಿತ್ತು.

ಕಾರ್ಮಿಕ ವರ್ಗವನ್ನು ತನ್ನ ವರ್ಗ ಹಿತಾಸಕ್ತಿಗಳ ಪ್ರಜ್ಞೆಯಿರುವ ಒಂದು ಪ್ರತ್ಯೇಕ ವರ್ಗವಾಗಿ ಒಂದುಗೂಡಿಸಿ ವಿಮೋಚನೆಯ ರಾಷ್ಟ್ರೀಯ ಆಂದೋಲನದ ನಾಯಕತ್ವಕ್ಕಾಗಿ ಹೋರಾಡಲು ಕಾರ್ಮಿಕರ ಮತ್ತು ರೈತರ ಕ್ರಾಂತಿಕಾರೀ ಸಖ್ಯತೆ ಏರ್ಪಡಿಸಿ ರಾಷ್ಟ್ರೀಯ ಸುಧಾರಣಾವಾದದ ಹಿಡಿತದಿಂದ ಅವನ್ನು ವಿಮೋಚಿಸಿ ಅವರ ಕ್ರಾಂತಿಕಾರೀ ಹೋರಾಟವನ್ನು ಸಾಮ್ರಾಜ್ಯಶಾಹೀ-ವಿರೋಧಿ, ಊಳಿಗಮಾನ್ಯ-ವಿರೋಧೀ ಕ್ರಾಂತಿಯತ್ತ ತಿರುಗಿಸಬೇಕಾದರೆ ಕಾರ್ಮಿಕ ವರ್ಗಕ್ಕೆ ತನ್ನದೇ ಆದ ಕಮ್ಯುನಿಸ್ಟ ಪಕ್ಷ ಅಗತ್ಯ ಎಂದು ಆ ಕರಡಿನಲ್ಲಿ ಹೇಳಲಾಗಿತ್ತು.

ಬಲಪಂಥೀಯರಿಗೆ ಕಿರಿಕಿರಿ

ಭಾರತ ರಾಷ್ಟ್ರೀಯ ಕಾಂಗ್ರೆಸ್ ತನ್ನ ಕಾರ್ಯಕ್ರಮದಲ್ಲಿ ಕೃಷಿ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಸರಿಯಾದ ನಿಲುವು ತಳೆಯುವಂತೆ ಕಮ್ಯುನಿಸ್ಟರು ಪ್ರಯತ್ನಿಸಿದರು. 1928 ರಲ್ಲಿ ಕಾಂಗ್ರೆಸ್ ಅಧಿವೇಶನದಲ್ಲಿ ಈ ದಿಕ್ಕಿನಲ್ಲಿ ಸೂಚಿಸಿದ ತಿದ್ದುಪಡಿ ಅಸ್ವೀಕೃತವಾದರೂ, ಈ ಹೋರಾಟ ಮುಂದೆ 1930ರ ದಶಕದಲ್ಲಿ ಕಾಂಗ್ರೆಸ್ ಸಮಾಜವಾದಿಗಳ ಸಹಕಾರದೊಂದಿಗೆ ರೈತಾಪಿ ವರ್ಗ ಹಾಗೂ ಕಿಸಾನ್ ಸಭಾಗಳನ್ನು ಸಂಘಟಿಸುವಲ್ಲಿ ಬಹಳಷ್ಟು ಸಹಾಯಕವಾಯಿತು. ಇದು ಸಿ.ಪಿ.ಐ.-ಸಿ.ಎಸ್.ಪಿ. ಐಕ್ಯತೆಯ ಒಂದು ಮುಖ್ಯ ಸಾಧನೆ.

ಅಷ್ಟೇ ಅಲ್ಲ, 30 ರ ದಶಕದ ಉತ್ತರಾರ್ಧದಲ್ಲಿ ಕಮ್ಯೂನಿಸ್ಟ ಅಂತರಾಷ್ಟ್ರೀಯದ ಕರೆಯ ಮೇರೆಗೆ ಜಾಗತಿಕ ಫ್ಯಾಸಿಸ್ಟ ವಿರೋಧಿ ಶಕ್ತಿಗಳ ಏಕೀಕರಣ ನಡೆಯುತ್ತಿದ್ದಾಗ ಭಾರತದಲ್ಲೂ ಕಾಂಗ್ರೆಸ್ಸಿನ ಎಡಪಂಥೀಯ ನಾಯಕರೂ ಮಾತ್ರವಲ್ಲ, ಗಾಂಧಿಯ ನೇತೃತ್ವದ ಬಲಪಂಥೀಯ ನಾಯಕರೂ ಕೂಡಾ ಬ್ರಿಟಿಶರ ವಿರುದ್ಧ ಹೋರಾಟದಲ್ಲಿ ಸೋವಿಯೆತ್ ಸಂಘ ಮತ್ತು ಇತರ ಸಮಾಜವಾದೀ ಹಾಗೂ ಕಮ್ಯುನಿಸ್ಟ ಶಕ್ತಿಗಳು ನಂಬಲರ್ಹ ಮಿತ್ರಶಕ್ತಿ ಎಂಬುದನ್ನು ಅರಿತುಕೊಂಡರು.

ಆದರೆ ಈ ಸಾಮ್ರಾಜ್ಯಶಾಹೀ-ವಿರೋಧೀ ಐಕ್ಯರಂಗ ಬೆಳೆಯುತ್ತಾ ಹೋದಂತೆ ಎಡಶಕ್ತಿಗಳು ಕ್ರೋಢೀಕರಣಗೊಳ್ಳುತ್ತಿರುವುದನ್ನು ಕಂಡ ಬಲಪಂಥೀಯರು ಭಯಭೀತರಾದರು. ಮುಂದೆ 1937 ರಲ್ಲಿ ಚುನಾವಣಾ ಹೋರಾಟವನ್ನು ಗೆಲ್ಲಬಲ್ಲ ಸಂಘಟನೆಯಾಗಿ ಕಾಂಗ್ರೆಸ್ಸನ್ನು ಬಲಗೊಳಿಸಲು ನೆರವಾಗುತ್ತದೆಂಬ ಏಕಮಾತ್ರ ಕಾರಣಕ್ಕೆ ಮೂರು ವರ್ಷಗಳ ಕಾಲ ಅವರು ಎಡಪಂಥೀಯ ಅಧ್ಯಕ್ಷರನ್ನು ಸಹಿಸಿಕೊಂಡರೂ ಕಾರ್ಯಕಾರೀ ಸಮಿತಿಯಲ್ಲಿ ಎಡಪಂಥೀಯರು ಅಲ್ಪಮತದಲ್ಲಿರುವಂತೆ ನೋಡಿಕೊಂಡಿದ್ದರು. ಹೇಗಿದ್ದರೂ ಎಡಪಂಥೀಯರ ಮುನ್ನಡೆಯಿಂದ ಅವರು ವ್ಯಾಕುಲಗೊಂಡರು. ಯಾಕೆಂದರೆ ಬ್ರಿಟಿಶ್ ಆಳರಸರೊಡನೆ ಈ ನಾಯಕರು ಒಂದು ಒಪ್ಪಂದಕ್ಕೆ ಬರಲು ಇದು ಅಡ್ಡಿಯಾಗಿತ್ತು.

ಸಂಬಂಧಗಳಲ್ಲಿ ಒಡಕು

ಆದ್ದರಿಂದಲೇ ಎಡಪಂಥೀಯ ಅಧ್ಯಕ್ಷನೊಬ್ಬನಿಗೆ ಇನ್ನೊಂದು ವರ್ಷದ ಅವಧಿ ನೀಡಲು ಬಲಪಂಥೀಯ ಕಾಂಗ್ರೆಸ್ ಮುಖಂಡರು ತಯಾರಾಗಲಿಲ್ಲ. ಇದರ ಪರಿಣಾಮವೇ ಕಾಂಗ್ರೆಸ್ ಅಧ್ಯಕ್ಷತೆಗಾಗಿ ಬೋಸ್ ಹಾಗೂ ಪಟ್ಟಾಭಿಯವರ ನಡುವಿನ ತೀವ್ರ ಚಾರಿತ್ರಿಕ ಸೆಣಸಾಟ. ಇದರಲ್ಲಿ ಎಡಪಂಥೀಯರು ಜಯಶಾಲಿಯಾದ ಮೇಲೆ ಸೆಣಸಾಟ ಮತ್ತಷ್ಟು ತೀವ್ರಗೊಂಡು ಚುನಾಯಿತ ಅಧ್ಯಕ್ಷರನ್ನು ಅಧಿಕಾರದಿಂದ ಎಳೆದುಹಾಕುವಲ್ಲಿ ಬಲಪಂಥೀಯರು ಸಫಲರಾದರು. ಇದು ಮೂರು ವರ್ಷಗಳ ಸಾಮ್ರಾಜ್ಯಶಾಹೀ-ವಿರೋಧೀ ಐಕ್ಯರಂಗ ಮುರಿಯಲು ಕಾರಣವಾಯಿತು. 1936 ರ ಲಕ್ನೌ ಅಧಿವೇಶನದೊಂದಿಗೆ ಆರಂಭವಾದ ಕಮ್ಯೂನಿಸ್ಟರು, ಕಾಂಗ್ರೆಸ್ ಸೋಶಲಿಸ್ಟರು ಹಾಗೂ ಎಡಕಾಂಗ್ರೆಸ್ಸಿಗರ ನಡುವಿನ ಈ ಐಕ್ಯರಂಗ 1939 ರ ತ್ರಿಪುರೀ ಅಧಿವೇಶನದೊಂದಿಗೆ ಕೊನೆಗೊಂಡಿತು.

> 1984 ನ್ನು "ಭಾರತದ ಸಮಾಜವಾದೀ ಆಂದೋಲನದ ಸುವರ್ಣ ಮಹೋತ್ಸವ ವರ್ಷ" ವಾಗಿ ಕೆಲವು ಸೋಶಲಿಸ್ಟರು ಆಚರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕಾ|| ಇ. ಎಂ. ಎಸ್. ನಂಬೂದಿರಿಪಾಡ್ ಸಿಪಿಐ [ಎಂ]ನ ಸೈದ್ಧಾಂತಿಕ ತ್ರೈಮಾಸಿಕ "ದಿ ಮಾರ್ಕ್ಸಿಸ್ಟ" ನಲ್ಲಿ ಬರೆದ ಲೇಖನದ ಕನ್ನಡ ಸಾರಾಂಶ ಅನುವಾದದ ಮೊದಲ ಭಾಗ 'ಐಕ್ಯರಂಗ' ದ ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಅದರಲ್ಲಿ ಹೇಗೆ ಜಾಗತಿಕ ರಂಗದಲ್ಲಿ ಬಂಡವಾಳಶಾಹಿಯ ಬಿಕ್ಕಟ್ಟು ಹಾಗೂ ಸಮಾಜವಾದದ ಯುಗಾಂತರಕಾರೀ ಸಾಧನೆಗಳಿಂದ ಪ್ರಭಾವಿತರಾದ ಹಾಗೂ ಆಂತರಿಕವಾಗಿ ಕಾಂಗ್ರೆಸ್ಸಿನ ಸಂವಿಧಾನದ ರಾಜಕೀಯದಿಂದ ಬೇಸತ್ತ ತೀವ್ರಗಾಮೀ ಕಾಂಗ್ರೆಸ್ಸಿಗರ ವೇದಿಕೆಯಾಗಿ ಸಿ.ಎಸ್.ಪಿ. ಜನ್ಮ ತಳೆಯಿತು, ಹೇಗೆ ಆ ಪಕ್ಷ ಇತರ ಎಡಪಂಥೀಯ ಶಕ್ತಿಗಳೊಂದಿಗೆ ಒಗ್ಗಟ್ಟಿನಿಂದ ಹೋರಾಡಲು ಬಯಸುತ್ತಿತ್ತು ಎಂದು ತಿಳಿಸಲಾಗಿತ್ತು. ಪರಿಣಾಮವಾಗಿ ಸಿ.ಎಸ್.ಪಿ. ಯ ಪ್ರಧಾನ ಕಾರ್ಯದರ್ಶಿ ಜಯಪ್ರಕಾಶ್ ನಾರಾಯಣ್ ಹಾಗೂ ಸಿಪಿಐ ನ ಪ್ರಧಾನ ಕಾರ್ಯದರ್ಶಿ ಪಿ. ಸಿ. ಜೋಷಿಯವರು ಒಂದು ಐಕ್ಯ ಕಾರ್ಯಾಚರಣೆಯ ಒಪ್ಪಂದಕ್ಕೆ ಸಹಿ ಹಾಕಿದರು.
>
> ಅನುವಾದದ ಉಳಿದ ಭಾಗವನ್ನು ಮುಂದೆ ಓದಿ....

ಸಿ.ಎಸ್.ಪಿ.-ಸಿ.ಪಿ.ಐ. ನಡುವಣ ಸಂಬಂಧಗಳಲ್ಲೂ ಇದು ಪ್ರತಿಫಲನಗೊಂಡಿತು. ಸಿ. ಎಸ್. ಪಿ. ಯ ಮೇಲೆ ಸಂಘಟನಾತ್ಮಕ ಹತೋಟಿ ಹೊಂದಿದ್ದ ಮಸಾನಿಯಂತಹವರು ಮೊದಲಿನಿಂದಲೂ ಕಮ್ಯುನಿಸ್ಟ-ವಿರೋಧಿಗಳಾಗಿದ್ದರು. ಆದರೆ ಆ ಪಕ್ಷಕ್ಕೆ ರಾಜಕೀಯ ನಾಯಕತ್ವ ಕೊಡುತ್ತಿದ್ದ ಜಯಪ್ರಕಾಶ್ ಕಮ್ಯುನಿಸ್ಟ-ಸೋಶಲಿಸ್ಟರ ಐಕ್ಯತೆ ಅಗತ್ಯ ಎನ್ನುತ್ತಿದ್ದರು. ಜಾಗತಿಕ ರಂಗದಲ್ಲಿ ಫ್ಯಾಸಿಸ್ಟ-ವಿರೋಧಿ ಶಕ್ತಿಗಳ ತೀವ್ರ ಮುನ್ನಡೆ ಹಾಗೂ ಪಾಶ್ಚಿಮಾತ್ಯ ಬಂಡವಾಳಶಾಹೀ ದೇಶಗಳ ಬೂರ್ಜ್ವಾ ಮುಂದಾಳುಗಳ ವಿಶ್ವಾಸಘಾತವನ್ನು ಗಮನವಿಟ್ಟು ವೀಕ್ಷಿಸುತ್ತಿದ್ದ ಅವರು ಜಾಗತಿಕ ಮಟ್ಟದಲ್ಲೂ ಕಮ್ಯುನಿಸ್ಟ-ಸೋಶಲಿಸ್ಟರ ಐಕ್ಯತೆ ಬಯಸುತ್ತಿದ್ದರು.

ಆದರೆ "30ರ ದಶಕದ ಉತ್ತರಾರ್ಧದಲ್ಲಿ ಟ್ರಾಟ್ಸ್‌ಕೀ ವಾದಿಗಳ ಮಾಸ್ಕೋ ವಿಚಾರಣೆ ಜಯಪ್ರಕಾಶರಂತಹ ಉದಾರವಾದಿ ಸೋಶಲಿಸ್ಟರನ್ನು ಉದ್ವಿಗ್ನಗೊಳಿಸಿತು. ಸೋವಿಯೆತ್ ಮುಂದಾಳುಗಳು ನಾಝೀ ಜರ್ಮನಿಯೊಂದಿಗೆ ಅನಾಕ್ರಮಣ ಸಂಧಿ ಮಾಡಿಕೊಂಡಾಗ ಇದು ಮತ್ತಷ್ಟು ಹೆಚ್ಚಿತು. ಈ ಬೆಳವಣಿಗೆಗಳು ಜೆ. ಪಿ. ಯವರನ್ನು ಸಿ.ಎಸ್.ಪಿ. ಯ ಉನ್ಮತ್ತ ಕಮ್ಯುನಿಸ್ಟ-ವಿರೋಧಿ ಮುಂದಾಳುಗಳಾದಂತಹ ಮಸಾನಿ, ಅಶೋಕ್ ಮೆಹ್ತಾ, ಅಚ್ಯುತ್ ಪಟವರ್ಧನ್ ಮುಂತಾದವರ ನಿಕಟ ತಂದವು.

ಪೊಳ್ಳುವಾದ

ಆದರೆ ಮೀರತ್ ಹಾಗೂ ಫೈಜ್‌ಪುರ್ ಪ್ರಬಂಧಗಳ ಆಧಾರದ ಮೇಲೆ ಸಿ.ಎಸ್.ಪಿ. ಗೆ ಸೇರಿ ದುಡಿದ ಹಲವಾರು ಯುವಕ ಕಾಂಗ್ರೆಸ್ಸಿಗರು ಸೋವಿಯೆತ್-ಪರ ನಿಲುವಿನಿಂದ ದೂರವಾಗಿ ಕಮ್ಯುನಿಸ್ಟ-ವಿರೋಧೀ ನಿಲುವಿನತ್ತ ಸಾಗಿದ ಜೆ. ಪಿ. ಯವರನ್ನು ಅನುಸರಿಸಲಿಲ್ಲ. ಫ್ಯಾಸಿಸ್ಟ-ವಿರೋಧೀ ಜಾಗತಿಕ ಶಕ್ತಿಗಳ ಕೋಟೆಯಾಗಿದ್ದ ಸೋವಿಯತ್ ಸಂಘ ಶತ್ರುಗಳ ಏಜೆಂಟರಿಂದ ಆಗಿನ ಸನ್ನಿವೇಶದಲ್ಲಿ ತನ್ನನ್ನು ರಕ್ಷಿಸಕೊಳ್ಳಬೇಕಾಗಿತ್ತು ಎಂದು ಯೋಚಿಸಿದ ಅವರು ಸೋವಿಯೆತ್ ಸಂಘದ ಹಾಗೂ ಕಮ್ಯುನಿಸ್ಟ ಅಂತರಾಷ್ಟ್ರೀಯದ ನಾಯಕತ್ವಕ್ಕೆ ಹಾರ್ದಿಕ ಬೆಂಬಲ ನೀಡಿದರು.

ಸೋವಿಯತ್-ಜರ್ಮನಿ ಒಪ್ಪಂದದಿಂದ ಆರಂಭದಲ್ಲಿ ಅವರಿಗೂ ಆಘಾತವಾಯಿತು ನಿಜ. ಆದರೆ ಸಾಮ್ರಾಜ್ಯಶಾಹೀ ಶಕ್ತಿಗಳು ಸೋವಿಯತ್ ಸಂಘವನ್ನು ಒಂಟಿಯಾಗಿಸಿ ಅದನ್ನು ದುರ್ಬಲಗೊಳಿಸಲು ಸರ್ವಪ್ರಯತ್ನ ನಡೆಸುತ್ತಿದ್ದಾಗ ಆ ಪ್ರಯತ್ನಗಳನ್ನು ಮುರಿಯುವುದು ಅಗತ್ಯವಾಗಿತ್ತು ಎಂಬುದು ಅವರಿಗೆ ಅರ್ಥವಾಯಿತು. ನಾಝಿಗಳ ವಿಶ್ವಾಸದ್ರೋಹೀ ಆಕ್ರಮಣ, ಅದಕ್ಕೆ ಸೋವಿಯತ್ ಜನತೆ ತೋರಿದ ಧೀರ ಪ್ರತಿರೋಧ, ಅಂತಿಮವಾಗಿ ಫ್ಯಾಸಿಸಂನ ಸೋಲು ಸೋವಿಯತ್ ನಾಯಕತ್ವ ತಳೆದ ನಿಲುವು ಸರಿಯಾದುದೆಂಬುದನ್ನು ಸಾಧಿಸಿ ತೋರಿದವು.

ಹೀಗೆ ದ್ವಿತೀಯ ಮಹಾಯುದ್ಧದ ಮುನ್ನ ಕೆಲವು ತಿಂಗಳುಗಳಲ್ಲಿ ಹಾಗೂ ಯುದ್ಧ ಆರಂಭವಾದ ಮೊದಲ ವರ್ಷಗಳಲ್ಲಿ ಈ ಮೊದಲು ಎಡ ಕ್ರೋಢೀಕರಣಕ್ಕೆ ನೆರವಾದ ಸಿ.ಎಸ್.ಪಿ. ಮತ್ತು ಸಿ.ಪಿ.ಐ. ಸಂಬಂಧಗಳು ಮುರಿದು ಹೋಗುವಂತಾಯಿತು. ಆಗ ಸಿ.ಎಸ್.ಪಿ. ಯ ಕೆಲವು ರಾಜ್ಯ, ಜಿಲ್ಲಾ ಹಾಗೂ ಸ್ಥಳೀಯ ಘಟಕಗಳು ಸಂಪೂರ್ಣವಾಗಿ ಸಿ.ಪಿ.ಐ. ಯಾಗಿ ಪರಿವರ್ತನೆಗೊಂಡವು. ಇದಕ್ಕೆ ಹಲವು ಕಮ್ಯುನಿಸ್ಟರನ್ನು "ಸಿ.ಎಸ್.ಪಿ. ಯೊಳಗೆ ನುಸುಳಿ" ಅದನ್ನು ಆಂತರಿಕವಾಗಿ

ಛಿದ್ರಗೊಳಿಸಲು ಕೆಲವು ಕಮ್ಯುನಿಸ್ಟ್ ಪಕ್ಷದ ನಾಯಕರು ಮಾಡಿದಕುಯುಕ್ತಿ ಎಂದು ಸಿ.ಎಸ್.ಪಿ. ಯ ಇತಿಹಾಸ ಬರೆದ ಕೆಲವು ಕಮ್ಯುನಿಸ್ಟ್-ವಿರೋಧಿ ಇತಿಹಾಸಕಾರರು ವಾದಿಸಿದ್ದಾರೆ.

ಮಸಾನಿ ಕಂಪನಿಯ ಕೃಪೆಯಿಂದಲ್ಲ

ಹೀಗೆ "ನುಸುಳಿ"ದವರಲ್ಲಿ ನಾನೂ ಒಬ್ಬನಾದುದರಿಂದ ಈ ಬಗ್ಗೆ ವಾಸ್ತವ ಸಂಗತಿಗಳನ್ನು ಹೇಳ ಬೇಕಾಗಿದೆ. ಅಕ್ಟೋಬರ್ 1934 ರಲ್ಲಿ ನಡೆದ ಸಿ.ಎಸ್.ಪಿ. ಯ ಮೊದಲ ಸಮ್ಮೇಳನದಲ್ಲಿ ನಾಲ್ವರು ಜಂಟಿ ಕಾರ್ಯದರ್ಶಿಗಳಲ್ಲಿ ಒಬ್ಬನಾಗಿ ನಾನೂ ಆರಿಸಲ್ಪಟ್ಟೆ. ಮುಂಬೈಯ ಸಮ್ಮೇಳನದಲ್ಲಿ ಕೇರಳದಿಂದ ಭಾಗವಹಿಸಿದವರಲ್ಲಿ [ಕೃಷ್ಣನ್ ಪಿಳ್ಳೈ, ಎ. ಕೆ. ಗೋಪಾಲನ್ ಹಾಗೂ ನಾನೂ ಸೇರಿದಂತೆ] ಯಾರೂ ಅದುವರೆಗೆ ಕಮ್ಯುನಿಸ್ಟ್ ಪಕ್ಷದ ಸಂಪರ್ಕಕ್ಕೆ ಬಂದಿರಲಿಲ್ಲ. ಈ ಸಮ್ಮೇಳನ ನಡೆದ ಒಂದು ವರ್ಷ ನಂತರವಷ್ಟೇ ಕೃಷ್ಣನ್ ಪಿಳ್ಳೈ ಹಾಗೂ ನಾನು ಸುಂದರಯ್ಯನವರ ಮೂಲಕ ಕಮ್ಯೂನಿಸ್ಟ್ ಪಕ್ಷದೊಡನೆ ಪ್ರಥಮ ಸಂಪರ್ಕ ಹೊಂದಿದ್ದು. ಈ ಪ್ರಥಮ ಸಂಪರ್ಕದ ನಂತರ ಕೇರಳದಲ್ಲಿ ಸಿಪಿಐ ನ ಮೊದಲ ಘಟಕ ಆರಂಭವಾಗಲು ಮತ್ತೆ ಎರಡು ವರ್ಷಗಳು ಬೇಕಾದವು.

ಈ ಅವಧಿಯಲ್ಲೆಲ್ಲಾ ಕೇರಳದ ಸಿ.ಎಸ್.ಪಿ. ನಾಯಕರು ಕಾರ್ಮಿಕ ಸಂಘಗಳಲ್ಲಿ, ಕಿಸಾನ್ ಸಭಾಗಳಲ್ಲಿ, ಕಾಂಗ್ರೆಸ್ಸನ್ನು ಕೇರಳದಲ್ಲಿ ಒಂದು ತೀವ್ರಗಾಮೀ ಸಾಮ್ರಾಜ್ಯಶಾಹೀ-ವಿರೋಧಿ ಸಂಘಟನೆಯಾಗಿ ಬೆಳೆಸುವಲ್ಲಿ ಸಮಾಜವಾದದ ನಿಷ್ಠ ಕಾರ್ಯಕರ್ತರಾಗಿ ದುಡಿದರು. ಈ ಘನ ದುಡಿಮೆಯೇ ನಮ್ಮೆಲ್ಲರನ್ನು ಕಾರ್ಮಿಕ ಸಂಘಗಳ, ಕಿಸಾನ್‌ಸಭಾದ ನಾಯಕರನ್ನಾಗಿ, ಎ.ಐ.ಸಿ.ಸಿ. ಸದಸ್ಯರನ್ನಾಗಿ, ನನ್ನನ್ನು ಕೇರಳ ಪ್ರಾಂತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷನನ್ನಾಗಿ ಹಾಗೂ ಆಗಿನ ಮದ್ರಾಸಿನ ಪ್ರಾಂತೀಯ ಅಸೆಂಬ್ಲಿಯ ಸದಸ್ಯನನ್ನಾಗಿ ಮಾಡಿತೇ ಹೊರತು ಮಸಾನಿ ಕಂಪನಿಯ ಕೃಪಾಕಟಾಕ್ಷವೇನೂ ಅಲ್ಲ. ಕಮ್ಯೂನಿಸ್ಟ್ ವಿರೋಧೀ "ಇತಿಹಾಸಕಾರರು" ಜನರನ್ನು ನಂಬಿಸಲು ಪ್ರಯತ್ನಿಸುವಂತೆ ಜೆ.ಪಿ. ಅಥವಾ ಇನ್ಯಾರೋ ನಮ್ಮನ್ನು "ಅಧಿಕಾರ ಸ್ಥಾನದಲ್ಲಿ ಕುಳ್ಳಿರಿಸಿದ್ದರಿಂದ" ಅಲ್ಲ, ನಮ್ಮ ಸ್ವಂತ ಕೆಲಸಗಳಿಂದಾಗಿಯೇ ನಾವು ಕಾಂಗ್ರೆಸ್ ಸೋಶಲಿಸ್ಟ್ ನಾಯಕರಾದದ್ದು.

ದುರಾಗ್ರಹ ಪೀಡಿತರಾಗಿರಲಿಲ್ಲ

ಹಾಗಿದ್ದರೆ, ಕೇರಳದಲ್ಲಿ ಕಾಂಗ್ರೆಸ್ ಸೋಶಲಿಸ್ಟರು ಒಬ್ಬರೂ ಬಿಡದೆ ಕಮ್ಯುನಿಸ್ಟ್ ಪಕ್ಷ ಏಕೆ ಸೇರಿದರು? ಯಾಕೆಂದರೆ ಅವರೆಲ್ಲಾ ಸೋವಿಯತ್ ಸಂಘದ ಮೊದಲ ಪಂಚವಾರ್ಷಿಕ ಯೋಜನೆಯ ಅಗಾಧ ಸಾಧನೆಗಳಿಂದ ಪ್ರಭಾವಿತರಾಗಿದ್ದವರು; ಸ್ವಾಭಾವಿಕವಾಗಿಯೇ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಭಾರತ ಹಾಗೂ ಇತರ ದೇಶಗಳ ಕ್ರಾಂತಿಕಾರಿಗಳಿಗೆ ಏಷ್ಯಾದ ಸಮಾಜವಾದೀ ಕ್ರಾಂತಿ ಮುಂದಿನ ದಾರಿ ತೋರಿಸಿಕೊಟ್ಟಿದೆ ಎಂಬ ತೀರ್ಮಾನಕ್ಕೆ ಬಂದಿದ್ದರು. ಆದ್ದರಿಂದಲೇ ಅವರು ಸಮಾಜವಾದ ತಮ್ಮ ಅಂತಿಮ ಗುರಿಯೆಂದು ಘೋಷಿಸಿದ ಕಾಂಗ್ರೆಸ್ಸಿಗರ ಪ್ರಥಮ ಗುಂಪನ್ನು ಅಂದರೆ ಜೆ. ಪಿ, ಮಸಾನಿ ಮುಂತಾದವರನ್ನು ಸೇರಿಕೊಂಡರು. ಬಹುಶಃ ಇದಕ್ಕೆ ಮೊದಲು ಆಗ ಕಾನೂನು ಬಾಹಿರವಾಗಿದ್ದ ಸಿ.ಪಿ.ಐ. ಯ ಸಂಪರ್ಕ ಪಡೆದಿದ್ದರೆ ಅವರು ಆ ಪಕ್ಷವನ್ನೇ ಸೇರಿ ಬಿಡುತ್ತಿದ್ದರೋ ಏನೋ. ಯಾಕೆಂದರೆ ಮಸಾನಿ ಕಂಪೆನಿಯಂತೆ ಕಮ್ಯುನಿಸ್ಟ್-ವಿರೋಧೀ, ಸೋವಿಯತ್-ವಿರೋಧೀ ದುರಾಗ್ರಹಗಳಿಂದ ಪೀಡಿತವಾದ ಬ್ರಿಟಿಷ್ ಲೇಬರ್ ಪಕ್ಷದ "ಸಮಾಜವಾದ" ದ ಹಿನ್ನೆಲೆ ಅವರದಾಗಿರಲಿಲ್ಲ.

ಆದ್ದರಿಂದಲೇ ಅವರು ಆಗ ಕಾನೂನುಬಾಹಿರವಾಗಿದ್ದ ಸಿ. ಪಿ. ಐ. ನ ಸಂಪರ್ಕ ದೊರೆತ ಕೂಡಲೇ ಸಿ.ಪಿ.ಐ.ನ ಹಾಗೂ ಮಸಾನಿ ಕಂಪೆನಿಯ ಧೋರಣೆಗಳನ್ನು ಗಂಭೀರವಾಗಿ ತುಲನೆ ಮಾಡಿ ಸಿ.ಪಿ.ಐ. ಹೆಚ್ಚು ಸರಿಯೆಂದು ನಿರ್ಧರಿಸಿದರು.

ಹಿಂದೆ ಗಾಂಧೀವಾದಿ ಅಥವಾ ನೆಹರೂವಾದೀ ಕಾಂಗ್ರೆಸ್ಸಿಗರಿಂದ ಕಾಂಗ್ರೆಸ್ ಸಮಾಜವಾದಿಗಳಾಗಿ ಅವರ ಪರಿವರ್ತನೆ ಎಷ್ಟು ಸ್ವಾಭಾವಿಕವಾಗಿತ್ತೋ, ಈಗ ಕಾಂಗ್ರೆಸ್ ಸಮಾಜವಾದದಿಂದ ಕಮ್ಯುನಿಸಂ ಕಡೆಗೆ ಪರಿವರ್ತನೆ ಕೂಡಾ ಅಷ್ಟೇ ಸಹಜವಾಗಿತ್ತು.

ಸರಿ ದಾರಿ ಯಾರದ್ದು ?

ಕೇರಳದಲ್ಲಿ ನಡೆದದ್ದು ಅಪವಾದವೇನೂ ಅಲ್ಲ. ಇತರ ರಾಜ್ಯಗಳಲ್ಲೂ ಅದೇ ನಡೆಯಿತು. ಜೆ. ಪಿ. ಯ "Why Socialism"ನಮೂಲಕ ಸಮಾಜವಾದೀ ಆಂದೋಲನಕ್ಕೆ ಬಂದು ಮೀರತ್ ಹಾಗೂ ಫೈಜ್‌ಪುರ್ ಪ್ರಬಂಧಗಳ ಮೂಲಕ ತಮ್ಮ ದೃಢ ವಿಚಾರಧಾರೆ ಪಡೆದುಕೊಂಡ- ಮಸಾನಿ ಕಂಪೆನಿಯ ಸೋವಿಯತ್-ವಿರೋಧೀ ಹಾಗೂ ಕಮ್ಯುನಿಸ್ಟ್-ವಿರೋಧೀ ದುರಾಗ್ರಹಗಳಿಗೆ ಬಲಿಯಾಗಲು ನಿರಾಕರಿಸಿದ್ದು ಸಹಜವೇ ಆಗಿತ್ತು. ಜೆ. ಪಿ. ಕೂಡಾ ಮೊದಮೊದಲು ನಿರಾಕರಿಸಿದ್ದರು. ನಂತರ ಅವರು ಬಲಿಯಾದರೂ ಅವರನ್ನು ಹಿಂಬಾಲಿಸಲು ಹಲವರು ಒಪ್ಪಲಿಲ್ಲ.

ಹೀಗೆ ಸಿ.ಎಸ್.ಪಿ. ಹಾಗೂ ಸಿಪಿಐ ನಡುವಣ ಸಂಬಂಧಗಳು ಮುರಿದು ಹೋದ ನಂತರ ಈ ಎರಡು ಪಕ್ಷಗಳು ಕ್ರಮಿಸಿದ ದಾರಿ ಎಷ್ಟೊಂದು ಭಿನ್ನವಾಗಿದೆಯೆಂದರೆ ವಾಸ್ತವ ಸಂಗತಿ ತಿಳಿದಿಲ್ಲದ ಯಾರಿಗೂ ಒಂದೊಮ್ಮೆ ಎಡ ಆಂದೋಲನದ ಬೆಳವಣಿಗೆಯ ಒಂದು ನಿರ್ದಿಷ್ಟ ಘಟ್ಟದಲ್ಲಿ ಇವೆರಡೂ ಪಕ್ಷಗಳೂ ಜತೆಗೂಡಿ ನೇತೃತ್ವ ನೀಡಿದ್ದವು ಎಂದು ಊಹಿಸಲೂ ಸಾಧ್ಯವಿಲ್ಲ. ಆದ್ದರಿಂದಲೇ ಈ ರೀತಿ ಸಂಬಂಧ ಮುರಿಯಲು ಕಾರಣವೇನು, ಯಾವ ಪಕ್ಷದ ದಾರಿ ಸರಿಯಾದುದೆಂದು ಈಗ ನಿರ್ಧಾರವಾಗಿದೆ ಎಂಬ ಪ್ರಶ್ನೆಯೇಳುತ್ತದೆ.

ಮಹಾಯುದ್ಧದ ಉತ್ತರಾರ್ಧದಲ್ಲಿ ಅರ್ಥಾತ್ ನಾಝೀ ಜರ್ಮನಿ ಸೋವಿಯತ್ ಸಂಘದ ಮೇಲೆ ಆಕ್ರಮಣ ನಡೆಸಿದ ನಂತರದ ದಿನಗಳಲ್ಲಿ ಸಿ.ಪಿ.ಐ. ತಳೆದ ನಿಲುವಿನಿಂದಾಗಿ ದೇಶಪ್ರೇಮೀ ಜನತೆಯಿಂದ ಅದು ತಾತ್ಕಾಲಿಕವಾಗಿ ದೂರವಾಗಬೇಕಾಗಿ ಬಂತು. ಭಾರತದ ಬ್ರಿಟಿಶ್ ಆಳರಸರು ನಡೆಸುವ ಯುದ್ಧ ಸಿ.ಪಿ.ಐ. ಪ್ರಕಾರ "ಜನತಾ ಯುದ್ಧ" ಹೇಗಾಗುತ್ತದೆ ಎನ್ನುವುದು ಜನತೆಗೆ ಅರ್ಥವಾಗಲಿಲ್ಲ. ಇದೇ ಸಮಯದಲ್ಲಿ "ಕ್ವಿಟ್ ಇಂಡಿಯಾ" ಹೋರಾಟದ ದಿನಗಳಲ್ಲಿ ಸಿ.ಎಸ್.ಪಿ. ಸಾಮ್ರಾಜ್ಯಶಾಹೀ-ವಿರೋಧಿ ಹೋರಾಟದ ರಂಗಸ್ಥಳದ ಮಧ್ಯಕ್ಕೆ ಬಂದಿತು.

ಸಮಾಜವಾದೀ ಪಕ್ಷದ ವಿಘಟನೆ

ಇದರಿಂದಾಗಿ ತಮ್ಮ ಹಾಗೂ ಕಮ್ಯುನಿಸ್ಟರ ನಡುವಿನ ಸ್ಪರ್ಧೆಯಲ್ಲಿ

ಇ. ಎಂ. ಎಸ್. ನಂಬೂದರಿಪಾಡ್

ತಾವು ಜನತೆಯ ಭಾರೀ ಬೆಂಬಲ ಗಳಿಸಬಹುದೆಂದು ಸಿ.ಎಸ್.ಪಿ. ನಾಯಕರು ಲೆಕ್ಕಾಚಾರ ಹಾಕಿ ಸ್ವಾತಂತ್ರ್ಯ ನಂತರ ತಮ್ಮ ಪಕ್ಷದ ಹೆಸರಿನ ಮುಂದಿನ "ಕಾಂಗ್ರೆಸ್ಸ"ನ್ನು ಕಳಚಿ "ಸಮಾಜವಾದಿ ಪಕ್ಷ" ಎಂದು ಪರಿವರ್ತಿಸಿಕೊಂಡು 1952 ರ ಮೊದಲ ಸಾರ್ವತ್ರಿಕ ಚುನಾವಣೆಗಳಲ್ಲಿ ತಾವು ಪ್ರಮುಖ ವಿರೋಧ ಪಕ್ಷವಾಗಿ, ಕೆಲವು ರಾಜ್ಯಗಳಲ್ಲಿ ಆಳುವ ಪಕ್ಷವಾಗಿಯೂ ಮೂಡಿ ಬರುವುದಾಗಿ ಭಾವಿಸಿದರು. ಆದರೆ ಅವರ ಲೆಕ್ಕಾಚಾರವೆಲ್ಲಾ ತಲೆ ಕೆಳಗಾಯಿತು; ಸಮಾಜವಾದೀ ಪಕ್ಷ ಅವಮಾನಕರ ಸೋಲನ್ನು ಅನುಭವಿಸಬೇಕಾಗಿ ಬಂತು.

ಆದರೆ ಅತ್ತ ಕಮ್ಯುನಿಸ್ಟ್ ಪಕ್ಷ ಪಶ್ಚಿಮ ಬಂಗಾಳ ಹಾಗೂ ಹೈದರಾಬಾದ್‌ಗಳಲ್ಲಿ ಮಾನ್ಯತೆ ಪಡೆದ ವಿರೋಧ ಪಕ್ಷವಾಗಿ, ಸಂಸತ್ತಿನ ಎರಡೂ ಸದನಗಳಲ್ಲಿ ಅತೀ ದೊಡ್ಡ ವಿರೋಧ ಗುಂಪಾಗಿ ಮೂಡಿ ಬಂದರೆ ತಿರುವಾಂಕೂರ್, ಕೊಚ್ಚಿನ್ ಮತ್ತು ಮದ್ರಾಸಿನಲ್ಲಿ ಪಕ್ಷದ ನೇತೃತ್ವದ ಸಂಯುಕ್ತರಂಗ ಪ್ರಥಮ ಕಾಂಗ್ರೆಸ್ಸೇತರ ಸರಕಾರ ರಚಿಸುವ ಸ್ಥಿತಿಯಲ್ಲಿ ಇತ್ತು.

ಚುನಾವಣೆಯ ಈ ಅವಮಾನಕರ ಸೋಲಿನ ನಂತರ ಸಮಾಜವಾದೀ ಪಕ್ಷದೊಳಗೆ ತೀವ್ರ ರಾಜಕೀಯ ಹಾಗೂ ಸೈದ್ಧಾಂತಿಕ ಗೊಂದಲ ಉಂಟಾಯಿತು. ಪರಿಣಾಮವಾಗಿ ವಿವಿಧ ಕಮ್ಯುನಿಸ್ಟ್-ವಿರೋಧಿ ಸಿ.ಎಸ್.ಪಿ. ನಾಯಕರು ವಿಭಿನ್ನ ದಾರಿ ಹಿಡಿದರು. ಜೆ. ಪಿ. ಸರ್ವೋದಯದೆಡೆಗೆ ಹೋದರು, ಮಸಾನಿ ಕಾಂಗ್ರೆಸ್ಸಿಗೆ ನಂತರ ಸ್ವತಂತ್ರ ಪಕ್ಷಕ್ಕೆ ಹೋದರು, ಪಟವರ್ಧನ್ ಸನ್ಯಾಸ ಸ್ವೀಕರಿಸಿದರು ಇತ್ಯಾದಿ. ಉಳಿದವರೆಲ್ಲಾ ಅತ್ಯಂತ ತಿರುಚು-ಮುರುಚಾದ ಹಾದಿ ತುಳಿಯಬೇಕಾಯಿತು— ಸಮಾಜವಾದೀ ಪಕ್ಷ ಹಾಗೂ ಪ್ರಜಾ ಪಕ್ಷ ಸೇರಿ ಪಿ.ಎಸ್.ಪಿ, ಅದು ಒಡೆದು ಪಿ.ಎಸ್.ಪಿ. ಮತ್ತು ಎಸ್.ಪಿ., ಅವು ಮತ್ತೆ ಸೇರಿ ಎಸ್.ಎಸ್.ಪಿ., ಮತ್ತೆ ಒಡಕು, ಅಂತಿಮವಾಗಿ 1977 ರಲ್ಲಿ ಜನತಾ ಪಕ್ಷದಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲಾ ಸಮಾಜವಾದೀ ಗುಂಪುಗಳ ವಿಲೀನ, ಮತ್ತೆ ವಿವಿಧ ಗುಂಪುಗಳಾಗಿ ವಿಭಜನೆ ಇತ್ಯಾದಿ. 1952 ರ ತನ್ನ ಪ್ರಥಮ ಚುನಾವಣಾ ಸೋಲಿನ ನಂತರ ಸಮಾಜವಾದೀ ಪಕ್ಷ ತುಳಿದ ಹಾದಿ ಅದು ಎಂತಹ ಆಳವಾದ ಬಿಕ್ಕಟ್ಟಿನಲ್ಲಿ ಬಿದ್ದಿತು ಎಂಬುದನ್ನು ತೋರಿಸಿಕೊಟ್ಟಿದೆ.

ವಿಭಿನ್ನ ಹಾದಿ ಹಿಡಿಯಲು ಕಾರಣ

ಕಮ್ಯುನಿಸ್ಟ್ ಪಕ್ಷವೂ ಸಿಪಿಐ [ಎಂ] ಹಾಗೂ ಸಿ.ಪಿ.ಐ. ಆಗಿ ಒಡೆದು, ನಂತರ ನಕ್ಸಲೀಯ ಹಾಗೂ ಡಾಂಗೆ ಗುಂಪುಗಳು ಉದಯಗೊಂಡುದನ್ನು ಸಮಾಜವಾದೀ ಪಕ್ಷದ ವಿಘಟನೆಯೊಂದಿಗೆ ಕೇವಲ ಹೊರನೋಟದಲ್ಲಷ್ಟೇ ಹೋಲಿಸಲು ಸಾಧ್ಯ. ವಾಸ್ತವವಾಗಿ, ಕಮ್ಯುನಿಸ್ಟರ ನಡುವಿನ ಸೈದ್ಧಾಂತಿಕ, ರಾಜಕೀಯ ಹಾಗೂ ಸಂಘಟನಾತ್ಮಕ ಹೋರಾಟಗಳಿಗೂ ಸಮಾಜವಾದೀ ಪಕ್ಷದ ವಿಘಟನೆಗೂ ಯಾವ ಹೋಲಿಕೆಯೂ ಇಲ್ಲ. ಆದ್ದರಿಂದಲೇ ಸ್ವಲ್ಪ ಸಮಯದ ನಂತರ ಕಮ್ಯುನಿಸ್ಟರ ಎರಡು ಪ್ರಮುಖ ಸಂಘಟನೆಗಳಾದ ಸಿ.ಪಿ.ಐ. [ಎಂ] ಹಾಗೂ ಸಿ.ಪಿ.ಐ. ಅನುಭವದಿಂದ ಪಾಠ ಕಲಿತು ಜಂಟೀ ಕಾರ್ಯಾಚರಣೆಗಳಲ್ಲಿ ಜತೆಗೂಡಲು ಸಾಧ್ಯವಾಯಿತು. ಅವುಗಳ ನಡುವಿನ ಪ್ರಮುಖ ಸೈದ್ಧಾಂತಿಕ ಪ್ರಶ್ನೆಗಳು ಇನ್ನೂ ಉಳಿದಿವೆಯಾದರೂ ಐಕ್ಯ ಕಾರ್ಯಾಚರಣೆಯ ವಲಯ ವಿಸ್ತರಿಸುತ್ತಿದೆ. ಆದರೆ ವಿವಿಧ ಸಮಾಜವಾದೀ ಗುಂಪುಗಳ ವಿಲೀನ ಹಾಗೂ ವಿಭಜನೆಗಳಲ್ಲಿ ಇಂತಹ ಯಾವ ಪ್ರಶ್ನೆಯೂ ಇರಲಿಲ್ಲ.

ಈ ಎರಡು ಪಕ್ಷಗಳು ತುಳಿದ ದಾರಿಗಳ ವಿಭಿನ್ನತೆಯ ಮೂಲವನ್ನು ಅವುಗಳ ರಾಜಕೀಯ ದೃಷ್ಟಿಕೋನಗಳಲ್ಲೇ ಕಾಣಬಹುದು. ಕಮ್ಯುನಿಸ್ಟರಲ್ಲಿ ಏನೇ ನ್ಯೂನ್ಯತೆಗಳಿದ್ದರೂ, ತಪ್ಪುಗಳನ್ನು ಮಾಡಿದರೂ ಅವರದ್ದು ದೃಢವಾದ ಕಾರ್ಮಿಕ ವರ್ಗದ ದೃಷ್ಟಿಕೋನವಾಗಿತ್ತು. ಆದರೆ ಸಿ.ಎಸ್.ಪಿ. ಗೆ ಆಧಾರವಾಗಿದ್ದದ್ದು ಬೂರ್ಜ್ವಾ ರಾಜಕೀಯ. ಸಿ.ಎಸ್.ಪಿ. ಯ ಸದಸ್ಯರು ಮೂಲತಃ ಕಾಂಗ್ರೆಸ್ಸಿಗರಾಗಿದ್ದ ಸಮಾಜವಾದಿಗಳು ಮಾತ್ರ. ಆದರೆ ಕಮ್ಯುನಿಸ್ಟರು ಕಾಂಗ್ರೆಸ್ ಸೇರಿ ಅದನ್ನು ಒಂದು ನಿಜವಾದ ಸಾಮ್ರಾಜ್ಯಶಾಹೀ-ವಿರೋಧೀ ಸಂಘಟನೆಯಾಗಿ ಬೆಳೆಸಲು ಪ್ರಯತ್ನಿಸಿದ್ದು ಕಮ್ಯುನಿಸ್ಟರಾಗಿಯೇ.

ಅನುಭವದ ಪಾಠ

ಕ್ವಿಟ್ ಇಂಡಿಯಾ ಹೋರಾಟ ಹಾಗೂ ನಂತರದ ವರ್ಷಗಳಲ್ಲಿ ಸಿ. ಎಸ್. ಪಿ. ಸಾಮ್ರಾಜ್ಯಶಾಹಿ—ವಿರೋಧೀ ಜನಸಮೂಹಗಳ ಜತೆಗಿದ್ದರೂ ಕೂಡಾ ಆಗಲೂ ಅವರು ಕಾಂಗ್ರೆಸ್ಸಿನ ನಿರ್ಣಯಗಳನ್ನು ಜ್ಯಾರಿಗೊಳಿಸುವ ಕಾರ್ಯಕರ್ತರಾಗಿದ್ದರಷ್ಟೆ. ಆದ್ದರಿಂದಲೇ ಕಾಂಗ್ರೆಸ್ ಹೋರಾಟದ ದಾರಿ ಬಿಟ್ಟು ಬ್ರಿಟಿಷ್ ಆಳರಸರೊಂದಿಗೆ ಮಾತುಕತೆಯ ಮೂಲಕ ಇತ್ಯರ್ಥಕ್ಕೆ ತೊಡಗಿದಾಗ ಅವರು ಏನೂ ಮಾಡಲಾರದವರಾದರು. ಆದರೆ ಅದೇ ಹೊತ್ತಿಗೆ ಕಮ್ಯುನಿಸ್ಟರಿಗೆ ತೀವ್ರಗತಿಯಲ್ಲಿ ಯುದ್ಧಾವಧಿಯ ತಮ್ಮ ಒಬ್ಬಂಟಿತನವನ್ನು ಮೀರಿನಿಂತು ತೆಲಂಗಾಣಾ, ಪುನ್ನಪ್ರಾ-ವಾಯಲಾರ್, ತೆಭಾಗಾ ಮುಂತಾದ ಶಕ್ತಿಶಾಲಿ ಹೋರಾಟಗಳನ್ನು ಸಂಘಟಿಸಲು ಸಾಧ್ಯವಾಯಿತು; ಆಝಾದ್ ಹಿಂದ್ ಸೇನೆಯ ಕೈದಿಗಳ ಹಾಗೂ ರಿನ್ ಬಂಡಾಯಗಾರರ ಬೆಂಬಲಕ್ಕೆ ನಿಂತು ಮತ್ತೊಮ್ಮೆ ಅವರು ಸಾಮ್ರಾಜ್ಯಶಾಹೀ - ವಿರೋಧೀ ಮುಖ್ಯ ಪ್ರವಾಹದ ಜತೆ ಸೇರಲು ಸಾಧ್ಯವಾಯಿತು.

1948ರ ಸಿ. ಪಿ. ಐ ನ ಎರಡನೇ ಸಮ್ಮೇಳನದ ನಂತರ ಇದು ಎಡಪಂಥವಾದೀ ದಾರಿಯತ್ತ ತಿರುಗಿ ಕಾಂಗ್ರೆಸ್ಸಿನ ಹೊಸ ಆಡಳಿತದ ವಿರುದ್ಧ ಜನತೆಯ ಅಸಂತೃಪ್ತಿಯ ಅಭಿವ್ಯಕ್ತಿಯ ಮೇರೆಯನ್ನು ಮೀರಿ. ಸಿ. ಪಿ. ಐ ಮುಂದುವರಿಯುವ ತಪ್ಪು ಮಾಡಿದಾಗಲೂ ಕೂಡಾ ಅದು ಹಿಂದೆ ಕ್ವಿಟ್ ಇಂಡಿಯಾ ಆಂದೋಲನದ ಕಾಲದಲ್ಲಾದಂತೆ ಮುಖ್ಯ ಪ್ರವಾಹದ ವಿರುದ್ಧ ಈಜುವ ಕೆಲಸಮಾಡಲಿಲ್ಲ. ಆದ್ದರಿಂದಲೇ 1952 ರ ಚುನಾವಣೆಗಳಲ್ಲಿ ಕಮ್ಯುನಿಸ್ಟರ ಸಾಧನೆ ಸೋಷಲಿಸ್ಟರಿಗಿಂತ ಬಹಳ ಉತ್ತಮ ಮಟ್ಟದ್ದಾಗಿತ್ತು.

ಸಿ. ಪಿ. ಐ ಹಾಗೂ ಸಮಾಜವಾದೀ ಪಕ್ಷದ ಭಿನ್ನ ಮಾರ್ಗಗಳನ್ನು ಮೊದಲ ಬಾರಿಗೆ ಚುನಾವಣಾ ಬೆಂಬಲದ ಪರೀಕ್ಷೆಗೆ ಒಡ್ಡಿದ ಮೇಲೆ ಈಗಾಗಲೇ 32 ವರ್ಷಗಳು ಸಂದಿವೆ. ಈ ಅವಧಿಯಲ್ಲಿ ಸಿ. ಪಿ. ಐ (ಎಂ) ಮತ್ತು ಸಿ. ಪಿ. ಐ ಹಾಗೂ ಮೂಲ ಸಿ. ಎಸ್. ಪಿ. ಯಿಂದವಿಭಜನೆಗೊಂಡ ವಿವಿಧ ಗುಂಪುಗಳ ಸಮೃದ್ಧ ಅನುಭವ ಆಳುವ ಪಕ್ಷದ ಸರ್ವಾಧಿಕಾರಿ ಪ್ರಯತ್ನಗಳ ವಿರುದ್ಧ ತಾವು ಇತರ ಪ್ರಜಾಪ್ರಭುತ್ವವಾದೀ ಶಕ್ತಿಗಳ ಜತೆಗೂಡಿಹೋರಾಡಬೇಕಾಗಿದೆ,ಬೂರ್ಜ್ವಾ ವರ್ಗವನ್ನು ಯಾವ ರೀತಿಯಲ್ಲೂ

[7ನೇ ಪುಟ ನೋಡಿ]

ಇಂದಿರಾ ಕೊಲೆ ಬಗ್ಗೆ ಅತೀವ ಪ್ರಚಾರವೇಕೆ ?

(3ನೇ ಪುಟದಿಂದ)

ರಾಜ್ಯದ 40 ಕ್ಕೂ ಮೇಲ್ಪಟ್ಟ ದೊಡ್ಡ ನಗರಗಳಲ್ಲಿ ಕಾಂಗ್ರೆಸ್ಸಿನವರೇ ಹಿಂಸಾಕೃತ್ಯದಲ್ಲಿ ತೊಡಗಿದ್ದರೆಂದೂ, ಪೋಲೀಸರೆಲ್ಲ ನಿಷ್ಕ್ರಿಯರಾಗಿದ್ದು ಇವರಿಗೆಲ್ಲ ಸಹಾಯ ಮಾಡಿದರೆಂದೂ ತಿಳಿದು ಬರುತ್ತದೆ. ಇಂದೋರನಲ್ಲಿದ್ದ ಹೊಳ್ಕರ ರಾಜ ಮನೆತನದ 200 ವರ್ಷ ಹಳೆಯದಾದ ರಾಜವಾಡೆ ಅರಮನೆಯನ್ನು ಸಂಪೂರ್ಣ ನಾಶ ಮಾಡಲಾಗಿದೆ. ಮರಾಠಾ ಚರಿತ್ರೆಯ ಕಾಗದ ಪತ್ರಗಳೂ, ಬಂಗಾರದ ಸಾಮಾನುಗಳೂ ಇತರ ಚರಿತ್ರಾರ್ಹ ವಸ್ತುಗಳಿಂದ ತುಂಬಿದ್ದ ಅರಮನೆಯನ್ನು ಹಾಳು ಮಾಡಲಾಗಿದೆ. ಪೊಲೀಸರು ನಿಷ್ಕ್ರಿಯರಾಗಿದ್ದುದರಿಂದ ಸೈನಿಕರು ಮಧ್ಯಪ್ರವೇಶಿಸಬೇಕಾಗಿ ಬಂದಿರುವ ಸುದ್ದಿ ಆಡಳಿತೆಯ ಮೇಲೆ ಕ್ಷ ಕಿರಣ ಬಿರುತ್ತದೆ.

ಅದರಂತೆಯೇ ದಿಲ್ಲಿಯಲ್ಲಿ ಮನೆಮಠಗಳನ್ನೆಲ್ಲ ಕಳೆದುಕೊಂಡ ಸಿಖ್ಖರಿಗಾಗಿ ಪರಿಹಾರ ಕೇಂದ್ರಗಳನ್ನು ರಚಿಸಲಾಗಿದೆ. ಅಂಥ ಕೇಂದ್ರಗಳಲ್ಲಿ ಒಂದೆಡೆ ಸಿಖ್ ನಿರಾಶ್ರಿತರು ಆಶ್ರಯ ಪಡೆಯುತ್ತಿದ್ದರೆ, ಮತ್ತೊಂದು ಕಡೆ ಲೂಟಿಯಾದ ವಸ್ತುಗಳನ್ನು ಕಂಡು ಹಿಡಿದು ಸಂಗ್ರಹಿಸಲಾಗುತ್ತಿತ್ತು. 3–4 ದಿವಸಗಳಲ್ಲಿ ರೂ 2 ಕೋಟಿಗೂ ಹೆಚ್ಚು ಬೆಲೆಬಾಳುವ ವಸ್ತುಗಳನ್ನು ಸಂಗ್ರಹಿಸಲಾಗಿದೆಯಂತೆ. ಲೂಟಿ ಮಾಡಿದವರು ಹೊತ್ತುಕೊಂಡುಹೋಗಲಾರದೆ ಬಿಟ್ಟುಹೋದ ವಸ್ತುಗಳಿವು. ಕಾಂಗ್ರೆಸ್ ಕಾರ್ಯಕರ್ತರೂ ಮುಖಂಡರೂ ಇಂಥ ಕೇಂದ್ರಗಳನ್ನು ಸಂದರ್ಶಿಸುತ್ತಿದ್ದರಂತೆ ಒಂದು ಶಿಬಿರಕ್ಕೆ ಅಂಥ ರಾಜಕಾರಣಿಗಳು ಸಹಾಯ ನೀಡಲು ಹೋದಾಗ ಅಲ್ಲಿದ್ದ ಸಿಖ್ ನಿವಾಸಿಗಳು ಆ ಗುಂಪಿನಲ್ಲಿದ್ದ ಹಲವಾರು ಜನರನ್ನು ಗುರ್ತಿಸಿ ಅವರೇ ತಮ್ಮ ಮನೆಗೆ ಬಂದು ಲೂಟಿ ಮಾಡಿದರು ಬೆಂಕಿ ಹಚ್ಚಿದರೆಂದು ಆರೋಪಿಸಿ, ಅವರನ್ನೆಲ್ಲ ಓಡಿಸಿದರಂತೆ.

ದೇಶಾದ್ಯಂತ ಸಿಖ್ ಜನಾಂಗದ ಮೇಲೆ ನಡೆದ ಅತ್ಯಾಚಾರದಲ್ಲಿ ಯಾರ ಕೈವಾಡವಿದೆಯೆಂಬುದನ್ನು ಈ ವರದಿಗಳು ತೋರಿಸಿಕೊಡುತ್ತಿವೆ. ಇಂದಿರಾ ಗಾಂಧಿಯ ಕೊಲೆ ಸಿಖ್‌ರಿಂದಲೇ ಆಗಿರುವುದರಿಂದ ಕಾಂಗ್ರೈ ಮುಖಂಡರೂ, ಕಾರ್ಯಕರ್ತರೂ ಅಂಥ ಹಿಂಸಾಚಾರದಲ್ಲಿ ತೊಡಗಿದ್ದಾರೆಂದು ತಿಳಿದು ಬಂದರೆ ಆಶ್ಚರ್ಯಪಡಬೇಕಾದ್ದಿಲ್ಲ. ತಮ್ಮ ಪ್ರಿಯದರ್ಶಿನಿಯನ್ನು –ತಾಯಿಯನ್ನು ಕೊಲೆ ಮಾಡಿದ್ದಕ್ಕೆ ಪ್ರತೀಕಾರ. ಯಾರೋ ಒಬ್ಬ ತೀವ್ರವಾದಿ ಒಬ್ಬ ತಾಯಿಯ ಕೊಲೆ ಮಾಡಿದರೆ ಆ ತಾಯಿಯ ಬೆಂಬಲಿಗರು, ಸಹಾನುಭೂತಿದಾರರು ಇತರ ನೂರಾರು ತಾಯಂದಿರನ್ನೂ, ಮಕ್ಕಳನ್ನೂ ಸುಟ್ಟುಹಾಕುವುದು, ಕೊಲೆ ಮಾಡುವುದು ಮಾತ್ರ ಕಾಂಗೈ ಬೆಂಬಲಿಗರ ಪೈಶಾಚಿಕ ಕೃತ್ಯವೆಂದೇ ಹೇಳಬೇಕಾಗುತ್ತದೆ. ಒಂದು ಧರ್ಮದ ಇಡೀ ಜನಾಂಗವನ್ನೇ ನಿರ್ನಾಮ ಮಾಡುವ ಕ್ರಮ ಹಿಟ್ಲರನಂತವರಿಗೆ ಸಲ್ಲುತ್ತದಲ್ಲದೆ, ಭಾರತೀಯರಿಗಲ್ಲ. ಕೊಲೆ ಮಾಡಿದವನಿಗೆ ಕೊಲೆ ಮಾಡಲು ಪ್ರೋತ್ಸಾಹಿಸಿದವರಿಗೆ ಶಿಕ್ಷೆಯಾಗಲೇಬೇಕು. ಆ ದೃಷ್ಟಿಯಿಂದ, ಕಲಿಸ್ತಾನ ಚಳುವಳಿಯ ಮುಖಂಡ ಇಂಗ್ಲೆಂಡ್‌ನಲ್ಲಿರುವ ಡಾ|| ಜಗಜಿತ್‌ಸಿಂಗ್‌ಚವ್ಹಾಣ ಮತ್ತು ವಿದೇಶದಲ್ಲೂ ಭಾರತದಲ್ಲೂ ಖಲಿಸ್ತಾನದ ಹೆಸರಲ್ಲಿ ಹಿಂಸೆಯಲ್ಲಿ ತೊಡಗಿರುವವರ ನಿರ್ನಾಮವಾಗಲೇಬೇಕು. ಅಂಥವರಿಗೆ ಸಹಾನುಭೂತಿ ತೋರಿಸುವವರಿಗೆ ಬೆಂಬಲ ಕೊಡುವವರಿಗೆ ಸರಿಯಾಗಿ ತಿಳಿಸಿ ಹೇಳಿ ಅವರು ತಮ್ಮ ನಿಲುವನ್ನು ಬದಲಿಸುವಂತೆ ಮಾಡಲೇಬೇಕು. ಡಾ|| ಚವ್ಹಾಣ್ ನಂತವರಿಗೆ ಸಹಾಯ ಮಾಡುವ ಆಶ್ರಯ ಕೊಡುವ ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ಹೋರಾಡಿ ಅವರನ್ನು ನಿರ್ನಾಮಮಾಡಬೇಕು, ಇಂದಿರಾಗಾಂಧಿಯ ಹತ್ಯೆಯ ಪ್ರತೀಕಾರ ಸಾಮ್ರಾಜ್ಯಶಾಹಿಗಳ, ಛಿದ್ರಕಾರ ಶಕ್ತಿಗಳ, ವಿಭಜಕರ, ಮತೀಯವಾದಿಗಳ, ವಿರುದ್ಧ ಹೋರಾಟದಲ್ಲಿ ಅಂಥಶಕ್ತಿಗಳ ಸರ್ವನಾಶದಲ್ಲಿ ಪರ್ಯವಸಾನಗೊಳ್ಳಬೇಕಲ್ಲದೆ, ಸಿಖ್ ಜನಾಂಗದ ಮೇಲೆ ನಡೆಸುವ ಅತ್ಯಾಚಾರ ಅನ್ಯಾಯಗಳಿಂದಲ್ಲೆಂಬುದನ್ನು ಎಲ್ಲರೂ ತಿಳಿದುಕೊಳ್ಳಬೇಕು.

ಭಾಜಪ ಅಧ್ಯಕ್ಷ ವಾಜಪೇಯಿ ಅವರು ಎಡರಂಗದ ಆಡಳಿತೆಯಲ್ಲಿರುವ ಪಶ್ಚಿಮ ಬಂಗಾಲದಲ್ಲಿ ಯಾವದೇ ತರದ ದೊಂಬಿ, ಜಾತೀಯಕಲಹ ನಡೆಯದಿರುವುದು ಗಮನಾರ್ಹವೆಂದೂ ಆ ಸರಕಾರ ಅಂಥ ವಿಧ್ವಂಸಕ ಕೃತ್ಯಗಳಿಗೆ ಅವಕಾಶಮಾಡಿ ಕೊಡದೆ ಉತ್ತಮ ರೀತಿಯಲ್ಲಿ ವರ್ತಿಸಿದೆಯೆಂದೂ, ಆಂಧ್ರದ ವಿಜಯವಾಡದಲ್ಲಿ ಒಂದು ಘಟನೆ ಸಂಭವಿಸಿದಾಗ ಅದನ್ನು ಮೂಲದಲ್ಲೇ ಚಿವುಟಿ ಹಾಕಿದ್ದರಿಂದ ಆಂಧ್ರ ಪ್ರದೇಶದಲ್ಲಿ ಕೂಡ ಹಿಂಸಾತ್ಮಕ ಕೃತ್ಯಗಳು ಘಟಿಸದಿರುವುದು ಪ್ರಶಂಸನೀಯವೆಂದೂ ಹೇಳಿ ಇಂದಿರಾ ಕಾಂಗ್ರೆಸ್ಸಿನ ಆಡಳಿತೆಯಲ್ಲಿರುವ ದಿಲ್ಲಿ ಮತ್ತು ಇತರ ರಾಜ್ಯಗಳಲ್ಲಿ ಮಾತ್ರ ಅಮಾನುಷ ರೀತಿಯಲ್ಲಿ ದೊಂಬಿ, ಹತ್ಯಾಕಾಂಡಗಳು ನಡೆದಿವೆಂದು ಆರೋಪ ಹೊರಿಸಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡತ್ವದಲ್ಲಿರುವ ಪಶ್ಚಿಮ ಬಂಗಾಲ-ತ್ರಿಪುರಾಗಳಲ್ಲಿ ಜನರಲ್ಲಿಯೇ ರಾಜಕೀಯ ಪ್ರಜ್ಞೆ ಬೆಳೆದು ಬರುತ್ತಿರುವುದರಿಂದ, ಜ್ಯೋತಿಬಸು ಸರಕಾರ ಸಕಾಲದಲ್ಲಿಯೇ ಸರಿಯಾದ ತುರ್ತು ಕ್ರಮಗಳನ್ನು ನಿಯೋಜಿಸಿದ್ದರಿಂದ, ಪರಿಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗಿದೆ. ಜನರು ಜಾಗೃತರಾಗಿದ್ದರೆ, ಸರಕಾರ ಎಚ್ಚರದಿಂದಿದ್ದರೆ, ಯಾವ ಸಮಾಜದ್ರೋಹಿಯೂ ಪರಿಸ್ಥಿತಿಯ ದುರ್ಲಾಭ ಪಡೆಯಲು ಶಕ್ಯವಿಲ್ಲವೆಂಬುದನ್ನು ಪಶ್ಚಿಮ ಬಂಗಾಲ ಸರಕಾರ ತೋರಿಸಿಕೊಟ್ಟಿದೆ. ಕಾಂಗೈ ಆಡಳಿತೆ ದರೋಡೆಕೋರರ, ಸಮಾಜ ದ್ರೋಹಿಗಳ ಬೆಂಬಲದಿಂದಲೇ ನಡೆಸಲ್ಪಡುತ್ತಿರುವುದರಿಂದ ಅಂಥವರ ಕೃತಿಗಳನ್ನು ತಡೆಹಿಡಿಯುವಲ್ಲಿ ಆಡಳಿತ ವಿಫಲಗೊಳ್ಳುತ್ತದೆ. ಈಗ ಮಾತ್ರವಲ್ಲ ಹಿಂದಿನ ಚರಿತ್ರೆಯು ತೋರಿಸಿಕೊಟ್ಟ ಅನುಭವವಿದಾಗಿದೆ.

ಆದ್ದರಿಂದಲೇ ಪಶ್ಚಿಮ ಬಂಗಾಲ, ಆಂಧ್ರ ಕರ್ನಾಟಕ ಸರಕಾರಗಳು ದೇಶ ಎದುರಿಸಬೇಕಾಗಿ ಬಂದ ಗಂಡಾಂತರ ಪರಿಸ್ಥಿತಿಯಲ್ಲಿ ಸಮಾಜಘಾತುಕ, ಜಾತೀಯವಾದಿ ಶಕ್ತಿಗಳನ್ನೆಲ್ಲ ಪ್ರತ್ಯೇಕಿಸಿ, ಶಾಂತಿ–ಸೌಹಾರ್ದತೆ ಕಾಪಾಡುವ ಚಳುವಳಿ ನಡೆಸಿದಾಗ, ಅವುಗಳಿಗೆ ದೂರದರ್ಶನ, ಆಕಾಶವಾಣಿಗಳಲ್ಲಿ ಪ್ರದರ್ಶನದ, ಪ್ರಸಾರದ ಅವಕಾಶ ಮಾಡಿಕೊಟ್ಟರೆ, ಅದು ಜನರ ಮನಸ್ಸಿನಲ್ಲಿ ಪರಿಣಾಮ ಬೀರಿ, ಕಾಂಗ್ರೆಸ್ ರಾಜ್ಯಗಳಲ್ಲಿ ನಡೆಯುತ್ತಿರುವ ಹಿಂಸಾಕೃತ್ಯಗಳ ಕುರಿತು ಜನರು ಸವಾಲು ಹಾಕಬಹುದೆಂದು ತಿಳಿದೇ ಪಶ್ಚಿಮ ಬಂಗಾಲ ಸರಕಾರದ ಚಟುವಟಿಕೆಗಳನ್ನು ದೂರದರ್ಶನದಲ್ಲಿ ತೋರಿಸಲು, ಆಕಾಶವಾಣಿಯಲ್ಲಿ ಪ್ರಚಾರ ಮಾಡಲು ಕೇಂದ್ರ ಸರಕಾರ ಹಿಂದೇಟು ಹಾಕುತ್ತಿದೆ.

ಕೇಂದ್ರ ಸರಕಾರದ ಈ ಪಕ್ಷಪಾತ ನೀತಿಯನ್ನು ಎಲ್ಲರೂ ಖಂಡಿಸಲೇಬೇಕು. ಇಂದಿರಾ ಜೀವಂತ ಇದ್ದಾಗ ವಿರೋಧ ಪಕ್ಷಗಳ ಮೇಲೆ, ವಿರೋಧ ಪಕ್ಷಗಳು ಆಳುತ್ತಿದ್ದ ಸರಕಾರಗಳ ಮೇಲೆ ಈ ರೀತಿಯ ಅನ್ಯಾಯ ಮಾಡುತ್ತಲೇ ಬಂದಿದ್ದರು. ಈಗ ಈಗ ರಾಜೀವಗಾಂಧಿ ಪ್ರಧಾನ ಮಂತ್ರಿಯಾಗಿದ್ದಾರೆ. ಸದ್ಯ ಹಳೇ ನೀತಿಯೇ ಮುಂದುವರಿಯುತ್ತಿದೆ. ರಾಜೀವ ಗಾಂಧಿ ತನ್ನ ತಾಯಿಯ ನೀತಿಯನ್ನೇ ಇನ್ನು ಮುಂದೆಯೂ ಅನುಸರಿಸುತ್ತ ಹೋಗುತ್ತಾರೋ ಅಥವಾ ಅದರಲ್ಲಿ ಬದಲಾವಣೆ ಮಾಡಿ ಸಾಮ್ರಾಜ್ಯಶಾಹಿಗಳ, ಮತೀಯ–ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ವಿರೋಧ ಪಕ್ಷಗಳ ಜೊತೆ ಸೇರಿ. ವಿರೋಧ ಪಕ್ಷಗಳ ಸರಕಾರಗಳಿಗೆ ಸರಿಯಾದ ಸಹಾಯ, ಸಹಕಾರ, ಪ್ರಚಾರದ ಅವಕಾಶಗಳನ್ನು ಒದಗಿಸಲು ಮುಂದೆ ಬರುತ್ತಾರೋ ಹೇಗೆಂಬುದನ್ನು ಕಾದು ನೋಡಬೇಕಾಗಿದೆ.

ಈಗಿನ ಪರಿಸ್ಥಿತಿಯಲ್ಲಿ ಇಂದಿರಾ ಗಾಂಧಿ ಭಕ್ತರು ಆಕೆಯ ಫೋಟೋಗಳಿಗೆ ಹೂಮಾಲೆ ಹಾಕಿ ಭಜನೆ ಮಾಡುತ್ತಿರುವಾಗ, ನಾವು ಎಡ ಪಕ್ಷಗಳು, ಪುರೋಗಾಮಿಗಳೆಲ್ಲ ಸಾಮ್ರಾಜ್ಯಶಾಹಿಗಳ, ಪ್ರತ್ಯೇಕತಾವಾದಿಗಳ, ಛಿದ್ರಕಾರಿ ಶಕ್ತಿಗಳ, ಮತೀಯವಾದಿಗಳ ವಿರುದ್ಧ ಸತತ ಹೋರಾಟ ಮುಂದುವರಿಸಬೇಕು. ಈ ವಿಷಯಗಳನ್ನು ಜನರ ಮಧ್ಯೆ ಕೊಂಡು ಹೋಗಿ ಅವರಲ್ಲಿ ಹೊಸ ತಿಳುವಳಿಕೆ ಜಾಗೃತಿಯನ್ನುಂಟು ಮಾಡಬೇಕು. ಇಂಥ ಕಾರ್ಯದಲ್ಲಿ ನಾವು ವಿಫಲರಾದರೆ ಮತ್ತೆ ಸರ್ವಾಧಿಕಾರಿ ಶಕ್ತಿ ತಲೆ ಎತ್ತಿ ದೇಶ ಗಂಡಾಂತರವನ್ನೆದುರಿಸುವ ಗಂಭೀರ ಪರಿಸ್ಥಿತಿ ಉಂಟಾಗಬಹುದೆಂದು ಎಚ್ಚರಿಸಲು ಅಪೇಕ್ಷಿಸುತ್ತೇವೆ.

ಸುದ್ದಿ ಸಂಗ್ರಹ

** ಧೋರಣೆಗಳ ಬಗ್ಗೆ ಮಾತನಾಡದೆ ಸೀಟು ಹೊಂದಾಣಿಕೆ ಕುರಿತು ಮಾತನಾಡುವುದು ಗಾಡಿಯನ್ನು ಕುದುರೆಯ ಮುಂದೆ ನಿಲ್ಲಿಸಿದಂತಾಗುವುದು —ಇ.ಎಂ. ಎಸ್. ನಂಬೂದರಿಪಾಡ್

—ಡೆಕ್ಕನ್ ಹೆರಾಲ್ಡ್ ಅ.17

** 1956 ರಿಂದ ನಾಗಲ್ಯಾಂಡ್‌ನಲ್ಲಿ, 1966 ರಿಂದ ಮಿಜೋರಾಂನಲ್ಲಿ, 1980 ರಿಂದ ಮಣಿಪುರದಲ್ಲಿ ಮತ್ತು 1982 ರಿಂದ ತ್ರಿಪುರಾದಲ್ಲಿ ಸತತವಾಗಿ ಸೈನ್ಯ ನೆಲೆಸಿದೆ.

—ದಿ ಸ್ಟೇಟ್ಸ್‌ಮನ್ ಅ.12

** ಇಂದಿರಾಗಾಂಧಿಯವರಿಗೆ ಸಾವು ತಕ್ಕ ಶಾಸ್ತಿಯಾಗಿತ್ತು ; ಅವರ ಪುತ್ರ ರಾಜೀವ್‌ಗಾಂಧಿ ಅವರದು ಈಗ ಮುಂದಿನ ಸರದಿ— ಖಲಿಸ್ತಾನದ ಸ್ವಯಂ ಘೋಷಿತ ನಾಯಕ ಡಾ. ಜಗಜಿತ್ ಸಿಂಗ ಚೌಹಾನ' ನವೆಂಬರ್ 6 ರಂದು ಲಂಡನ್‌ನಲ್ಲಿ ನೀಡಿರುವ ಹೇಳಿಕೆ.

—ಪ್ರಜಾವಾಣಿ ನ.7

** ದಿವಂಗತ ಪ್ರಧಾನಿ ಇಂದಿರಾಗಾಂಧಿ ಅವರ ಹತ್ಯೆ ವಿದೇಶದ ಬೆಂಬಲವಿರುವ ಭಾರಿ ಒಳಸಂಚಿನ ಒಂದು ಭಾಗ ಎಂದು ರಷ್ಯಾ ಟೀಕಿಸಿರುವುದನ್ನು ಸುಲಭವಾಗಿ ತಳ್ಳಿಹಾಕಲು ಸಾಧ್ಯವಿಲ್ಲ ಎಂದು ಇಂದಿರಾ ಅವರ ಸ್ನೇಹಿತ ಹಾಗೂ ಅಮೆರಿಕಾದ ಲೇಖಕ ರಾಲ್ಫ್‌ಬುಲ್ಟ್ ಜೆನ್ಸ್ ಹೇಳಿದ್ದಾರೆ.

—ಪ್ರಜಾವಾಣಿ ನ.7

** ಇಂದು ಜನರು ಸೀಮೆಎಣ್ಣೆ ಬದಲು ವಿಮಾನ ನಿಲ್ದಾಣಗಳ ಬೇಡಿಕೆಯಿಡುತ್ತಿದ್ದು ಇದು ಪ್ರಗತಿಯ ಸೂಚಕವಾಗಿದೆ. ಎಂದು ಶ್ರೀ ರಾಜೀವ್ ಗಾಂಧಿ ಹೇಳಿದರು.

—ಯು. ಎನ್. ಐ ಅ.11

ಎ. ಕೆ. ಜಿ. ಭವನಕ್ಕೆ ಧನ ಸಹಾಯ

ದೆಹಲಿಯಲ್ಲಿ ನಿರ್ಮಿಸಲಾಗುತ್ತಿರುವ ಎ.ಕೆ. ಗೋಪಾಲನ್ ಭವನಕ್ಕೆ ಕುದುರೆ ಮುಖದಲ್ಲಿರುವ ಹೆಚ್. ಎಸ್. ಸಿ. ಎಲ್. ಎಂಪ್ಲಾಯೀಸ್ ಅಸೋಸಿಯೇಶನ್‌ನ ಸದಸ್ಯರು ಮಲೆನಾಡು ಪ್ರಾದೇಶಿಕ ಸಮಿತಿಯ ಮೂಲಕ ತಲಾ 10 ರೂಪಾಯಿಗಳನ್ನು ನೀಡಿದ್ದಾರೆ. ಅವರ ಹೆಸರುಗಳು ಕೆಳ ಕಂಡಂತಿವೆ.

1) ಟಿ. ಸುಬ್ಬಯ್ಯ, 2) ಕೆ. ಎಂ. ಮಹೇಶ್ವರಪ್ಪ, 3) ಟಿ. ತಿಪ್ಪೇಶ್ 4) ಕೇಳುಕುಟ್ಟಿ, 5) ಎಚ್.ಎಂ. ಮಹೇಂದ್ರಪ್ಪ, 6) ಜಿ. ಎಸ್. ರಾಘವೇಂದ್ರ, 7) ಬಿ. ಕೆ. ಚಂದ್ರಶೇಖರ್, 8) ಪಿ. ಕೆ. ಗಂಗಾಧರ, 9) ಎಚ್. ಎನ್. ಮೋಟಿಬೆನ್ನೂರ್, 10) ಎನ್, ಕೃಷ್ಣ 11) ಟಿ. ಸದಾಶಿವ, 12) ಜಿ. ಟಿ. ಕ್ರಾಸ್ಟ, 13) ಸಿದ್ದಣ್ಣ ಕಟ್ಟಿ 14) ಪಿ. ಬಾಲಕೃಷ್ಣ, 15) ನರಸಿಂಹಯ್ಯ, 16) ಎಂ. ರಾಜನ್ 17) ಎಂ. ಅತ್ತನ್‌ಕುಟ್ಟಿ, 18) ಟಿ. ಆರ್. ನಾಗರಾಜ, 19) ಬಿ. ಕೆ. ಶೀತೇಗೌಡ, 20) ಕೆ. ಆರ್. ಗೋಪಿ, 21) ಎಂ. ಗುರುಶಾಂತಪ್ಪ, 22) ಕೆ. ಎಂ. ಚಂದ್ರೇಗೌಡ, 23) ಎಚ್. ಎಸ್. ಮಂಜುನಾಥ್, 24) ಎನ್. ನಾರಾಯಣ, 25) ಶೀನ ನಾಯಕ್, 26) ಮಾರ್ಸೆಲ್ ಸಿಕೇರ, 27) ಕೃಷ್ಣೇಗೌಡ, 28) ವಿ. ರಾಜೇಂದ್ರನ್, 29) ಕೆ.ಟಿ. ರಾಘವೇಂದ್ರ, 0) ಹಾಲೇಶಪ್ಪ, 3!) ಕೆ. ಶಿವಪ್ಪ, 32) ನೀಲಮ್ಮ, 33) ಎಸ್. ಆರ್. ಗಿಡ್ಡಯ್ಯ, 34) ಕೇಶವ ಶಾಸ್ತ್ರಿ, 35) ಎಚ್. ಪರಸಪ್ಪ, 36) ಮಂಜುನಾಥ್, 37) ರಾಮಪ್ಪ ಗೌಡ, 38) ಎಚ್. ಎನ್. ಶ್ರೀನಿವಾಸ, 49) ಮುನಿಯಪ್ಪ, 40) ಜೆ. ಎಂ. ಜನಾರ್ಧನ್, 41) ವಿಠಲ ಆಚಾರಿ 42) ಬಾಬುರಾವ್, 43) ಪಿ. ಈಶ್ವರ, 44) ಲಕ್ಷ್ಮಣಗೌಡ, 45) ಟಿ. ಚಂದ್ರಶೇಖರ್, 46) ಶೀನ, 47) ಪಿ. ರಾಡ್ರಿಗಸ್, 48) ಬಿ. ಕೃಷ್ಣಪ್ಪ. 49) ಎಂ.ಎನ್. ರುದ್ರಪ್ಪ

ಈ ಮೇಲಿನ ಕಾರ್ಮಿಕರೆಲ್ಲ ಕಳೆದ ಕೆಲವು ವರ್ಷಗಳಿಂದ ಕೆಲಸದಿಂದ ತೆಗೆದು ಹಾಕಲ್ಪಟ್ಟಿದ್ದಾರೆ. ಅವರ ಕೇಸು ಕೋರ್ಟಿನ ಮುಂದಿದೆ ಅವರಿಗೆ 2 ತಿಂಗಳ ವೇತನ ನೀಡಬೇಕೆಂದು ಕೋರ್ಟು ಆಜ್ಞೆ ನೀಡಿದ್ದು ಆ ನಿರ್ಣಯದ ಪ್ರಕಾರ ಕೆಲಸಗಾರರಿಗೆ ವೇತನ ವಿತರಣೆಯಾದಾಗ ನೌಕರಿ ಕಳಕೊಂಡ ಕಾರ್ಮಿಕರು ಅಲ್ಪ ಸಹಾಯ ನೀಡಿದ್ದಕ್ಕಾಗಿ ಸಿಪಿಐ [ಎಂ] ರಾಜ್ಯ ಸಮಿತಿ ಅವರಿಗೆ ಕೆಂಪು ವಂದನೆಗಳನ್ನು ಸಲ್ಲಿಸುತ್ತದೆ.

ಅಂತರಾಷ್ಟ್ರೀಯ

ಬಾಂಗ್ಲಾ ದೇಶದಲ್ಲಿ ಜನತೆಯ ಹೋರಾಟ

ಜನರಲ್ ಏರ್ಷ್ಯಾಡ್ ಆಡಳಿತೆಯ ವಿರುದ್ಧ ಬಾಂಗ್ಲಾ ದೇಶದ ಜನತೆ ಅಪ್ರತಿಮ ಹೋರಾಟವನ್ನು ನಡೆಸುತ್ತಿದ್ದಾರೆ. ನಾವು ಅದನ್ನು ಸ್ವಾಗತಿಸುತ್ತೇವೆ. ಅವರಿಗೆ ಶುಭ ಹಾರೈಸುತ್ತೇವೆ.

ಭಾರತ ದೇಶವನ್ನು ಅಮೇರಿಕದ ಸಾಮ್ರಾಜ್ಯಶಾಹಿ ಸುತ್ತುವರಿಯಲು ಸರ್ವ ವಿಧದ ಪ್ರಯತ್ನ ನಡೆಸಿದೆ. ಭಾರತ ದೇಶ ತಟಸ್ಥ ಧೋರಣೆಯನ್ನು ಬಿಟ್ಟುಕೊಟ್ಟು ತಾನು ಹೇಳಿದಂತೆ ಕುಣಿಯಬೇಕೆಂದು ಒತ್ತಾಯ ಪಡಿಸುವ ಸಲುವಾಗಿ ಈ ಪ್ರಯತ್ನ ನಡೆಸಿದೆ. ಭಾರತ ದೇಶ ತನ್ನ ಬಗಲೊಳಗೆ ಬಿದ್ದದ್ದಾರೆ ಇಡೀ ಪ್ರದೇಶ ತನ್ನ ಕೈವಶವಾದಂತೆ, ತನ್ನ ಯುದ್ಧ ನೀತಿಯ ಮುಂದುವರಿಕೆಗೆ ಸ್ವಾತಂತ್ರ್ಯ ಸಿಕ್ಕಿದಂತೆ ಎಂದು ಅಮೇರಿಕ ಯೋಚಿಸುತ್ತಿದೆ. ಆ ಕಾರಣದಿಂದಲೇ ಪಾಕಿಸ್ತಾನಕ್ಕೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಪೂರೈಕೆ ಮಾಡಲಾಗುತ್ತಿದೆ. ಇತ್ತೀಚಿಗಿನ ಶ್ರೀಲಂಕಾದ ಘಟನೆಗಳಿಂದಾಗಿ ಅದು ಅಲ್ಲಿ ಭದ್ರ ತಳವೂರಿ ಕೂತಿದೆ. ಮುಜಾಹರ್ ರಹಮಾನರ ಕೊಲೆಯ ನಂತರ ಜನರಲ್ ಎರ್ಷ್ಯಾಡ್ ಆಡಳಿತೆಯಲ್ಲಿ ಅಮೇರಿಕೆಯ ಸ್ಪಷ್ಟ ಕೈವಾಡವನ್ನು ಕಾಣಬಹುದಾಗಿದೆ.

ಈ ಭಾಗದ ಪ್ರತಿಗಾಮಿ ಶಕ್ತಿಗಳಿಗೆ, ಮುಸ್ಲಿಂ ಸಂಪ್ರದಾಯವಾದಿಗಳಿಗೆ ಬೆಂಬಲ ಕೊಡಲು ಅಮೇರಿಕ ಪ್ರಯತ್ನ ನಡೆಸಿರುವಾಗ, ಈ ರಾಜ್ಯಗಳಲ್ಲಿಯ ಸರಕಾರಗಳ ಆರ್ಥಿಕ ನೀತಿಯಿಂದಾಗಿ ಬೇಸತ್ತ ಜನತೆ, ಈ ಸರಕಾರಗಳ ವಿರುದ್ಧ ತೀವ್ರ ಹೋರಾಟ ಮುಂದುವರಿಸಿದೆ. ಅದೇ ಸಮಯದಲ್ಲಿ ಸ್ವಾತಂತ್ರ್ಯ ಪಡೆದಾಗ ಗಳಿಸಿದ್ದ ಪ್ರಜಾಪ್ರಭುತ್ವ ಹಕ್ಕುಗಳನ್ನು ನಾಶಪಡಿಸುವ ಉದ್ದೇಶದಿಂದ ಎಲ್ಲ ಪ್ರಜಾಪ್ರಭುತ್ವ ಸಂಸ್ಥೆಗಳನ್ನೂ ರದ್ದುಪಡಿಸಲಾಗಿದೆ.

ಚುನಾವಣೆ ನಡೆಸಬೇಕೆಂದು ಕಳೆದ ನಾಲ್ಕು ವರ್ಷಗಳಿಂದಲೂ ಪಾಕಿಸ್ತಾನದಲ್ಲಿ ಹೋರಾಟ ನಡೆಯುತ್ತಲೇ ಇದೆ. ನಾಗರೀಕ ಹಕ್ಕುಗಳನ್ನು ಅಲ್ಲಗೆಳೆದು, ಸಾವಿರಾರು ಜನರನ್ನು ಬಂಧಿಸಿ, ನೂರಾರು ಜನರನ್ನು ಕೊಂದು ಹಾಕಿದರೂ ಕೂಡ, ಅಲ್ಲಿಯ ಜನತೆಯ ಚಳುವಳಿಯನ್ನು ಹತ್ತಿಕ್ಕಲು ಮಿಲಿಟರಿ ಆಡಳಿತೆಗೆ ಸಾಧ್ಯವಾಗಿಲ್ಲ. ಬಂಗ್ಲಾದೇಶದ ಚಳುವಳಿ ಹೊಸ ಸ್ವರೂಪ ತಾಳಿದೆ, ಹೆಚ್ಚು ಮಹತ್ವ ಪಡೆಯುತ್ತಿದೆ. ಅವಾಮಿ ಲೀಗ್, ಮತ್ತು ಬೇಗಂ ಖಲೀದಾ ಅವರ 7 ಪಕ್ಷಗಳ ಸಂಯುಕ್ತ ರಂಗದ ನೇತೃತ್ವದಲ್ಲಿ 15 ಪಕ್ಷಗಳು ಹೋರಾಟಗಳ ಮೂಲಕ ಜನತೆಯನ್ನು ಬೀದಿಗಿಳಿಸಿದ್ದಾರೆ. ಸೆಪ್ಟೆಂಬರ್ 27 ರ ಯಶಸ್ವಿಯಾದ ಒಂದು ದಿವಸದ ಕಾರ್ಯಕ್ರಮ ಹೆಚ್ಚು ಉತ್ತೇಜಕವಾಗಿದೆ. ಮಾರ್ಶಲ್ ಕಾಯಿದೆ ರದ್ದಾಗಬೇಕು, ಪಕ್ಷೇತರ ಸರಕಾರ ರಚನೆಯಾಗಬೇಕು, ಕೂಡಲೇ ಚುನಾವಣೆ ನಡೆಸಬೇಕೆಂಬ ಬೇಡಿಕೆಗಳಿಗೆ ಜನಸ್ತೋಮದ ಬೆಂಬಲ ಇನ್ನೂ ಜಾಸ್ತಿಯಾಗುತ್ತ ಹೊರಟಿದೆ.

ಅಧ್ಯಕ್ಷೀಯ ಚುನಾವಣೆಯ ಮುಂಚಿತವಾಗಿಯೇ ಲೋಕಸಭೆ ಚುನಾವಣೆ ನಡೆಯಬೇಕೆಂಬ ಬೇಡಿಕೆಗಾಗಿ ನಡೆದ ಪ್ರತಿಭಟನೆಯಿಂದಾಗಿ ಹಿಂದೇಟು ಹಾಕಿದ ಎರ್ಶಾದ್, ಹೊಸ ತಂತ್ರಗಳ ಮೂಲಕ ಅಧಿಕಾರ ಉಳಿಸಿಕೊಳ್ಳುವ ಪ್ರಯತ್ನದಲ್ಲಿದ್ದಾನೆ. ಜನದಳ ಎಂಬ ಒಂದು ರಾಜಕೀಯ ಪಕ್ಷವನ್ನು ಕಟ್ಟಿ ಅದರ ಮುಖಂಡತ್ವವನ್ನು ವಹಿಸಲು ತಾನು ಸಿದ್ಧನಿದ್ದೇನೆ, ನೀವೆಲ್ಲ ಚುನಾವಣೆಗೆ ಒಪ್ಪಿಗೆ ಕೊಡಿ ಎಂದು ಒತ್ತಾಯ ಮಾಡುತ್ತಿದ್ದಾನೆ. ಮಾರ್ಶಲ್ ಎರ್ಶಾದ್‌ನ ಬಲೆಗೆ ಬೀಳದೆ ವಿರೋಧ ಪಕ್ಷಗಳು ತಮ್ಮ ಬೇಡಿಕೆಗಳಿಗಾಗಿ ತೀವ್ರ ಹೋರಾಟ ಮುಂದುವರಿಸಿದ್ದಾರೆ. ಎರ್ಶಾದ್ ಜನ ಬೆಂಬಲ ಕಳೆದುಕೊಳ್ಳುತ್ತಿದ್ದಾನೆ.

ಹದಿನೈದು ಪಕ್ಷಗಳ ಸಂಯುಕ್ತ ರಂಗದ ಆದೇಶದ ಮೇರೆಗೆ ಅಕ್ಟೋಬರ್ 11ರಂದು ನಾಲ್ಕೂವರೆ ಲಕ್ಷಕ್ಕೂ ಹೆಚ್ಚು ಜನ ಡಾಕಾದಲ್ಲಿ ನೆರೆದಿದ್ದರು. ಎರ್ಶಾದ್ ಚುನಾವಣೆ ನಡೆಸಬೇಕೆಂದಿರುವ ಡಿಸೆಂಬರ್ 8 ರಂದು ಸಂಪೂರ್ಣ ಬಂದ್ ಆಚರಿಸಬೇಕೆಂದೂ, ಡಿಸೆಂಬರ್ 9 ರಿಂದ ಅಸಹಕಾರ ಚಳುವಳಿ ಪ್ರಾರಂಭಿಸಬೇಕೆಂದೂ ಬೃಹತ್ ಸಭೆಯಲ್ಲಿ ಕರೆಕೊಡಲಾಯಿತು.

ಜಿಲ್ಲಾ ಪರಿಷತ್ ಚುನಾವಣೆಗಳನ್ನು ಬಹಿಷ್ಕರಿಸಬೇಕೆಂದು ಈ ವಿರೋಧ ಪಕ್ಷಗಳು ಕರೆ ಕೊಟ್ಟಾಗ, ಅದಕ್ಕೆ ದೊರೆತ ಗ್ರಾಮಾಂತರ ಪ್ರದೇಶಗಳ ಜನರ ಬೆಂಬಲದಿಂದಾಗಿ ಆ ಚುನಾವಣೆಯನ್ನು ಮುಂದೂಡಬೇಕಾಯಿತು. ಈಗ ನಗರದ ಜನತೆ ಹರತಾಳ, ಬಂದ್‌ಗಳಿಗೆ ನೀಡುತ್ತಿರುವ ಬೆಂಬಲವನ್ನು ನೋಡಿದರೆ ಅವಾಮಿ ಲೀಗ್ ಮುಖಂಡತ್ವದ ವಿರೋಧ ಪಕ್ಷಗಳ ಬೇಡಿಕೆ ಸಫಲವಾಗುವುದರಲ್ಲಿ ಸಂಶಯವಿಲ್ಲ. ಬಂಗ್ಲಾದೇಶದಲ್ಲಿ ಚುನಾವಣೆಯಾಗಿ ಅವಾಮಿ ಲೀಗಿನ ಮುಖಂಡತ್ವದಲ್ಲಿ ಹೊಸ ಸರಕಾರ ರಚನೆಯಾದರೆ, ಮಾರ್ಶಲ್ ಎರ್ಶಾದ್ ಸೋತು ಹೋದರೆ ಅಮೇರಿಕನ್ ಸಾಮ್ರಾಜ್ಯಶಾಹಿಯ ಒಂದು ಕೊಂಡಿ ಮುರಿದು ಬಿದ್ದಂತಾಗುತ್ತದೆ. ಹಾಗಾಗಲೆಂದು ಹಾರೈಸುತ್ತೇವೆ. ●

ಶಾಲೆ ಬಾಗಿಲಿಗೇ ಪಠ್ಯ ಪುಸ್ತಕಗಳು

(2ನೇ ಪುಟದಿಂದ)

ಬಿಟ್ಟು ಶಾಸಕರಾಗಲೀ ಮುಸಲ್ಮಾನರಾಗಲೀ ಇವರ ಬೆನ್ನು ಹಿಡಿಯಲು ಮುಂದೆ ಬರಲಿಲ್ಲ.

ಕಾಂಗ್ರೆಯಲ್ಲಿ ಸೇರಿಸಲು ಮೊಯಿಲಿಯವರಾಗಲೀ, ಇಂದಿರಾಗಾಂಧಿಯಾಗಲೀ ಹೆಚ್ಚು ಆತುರ ತೋರಿಸಲಿಲ್ಲ. ಅದರಿಂದಾಗಿ ನಿರಾಶೆಗೊಂಡ ಶೇಠರು ಮತ್ತೆ ಜನತಾ ಪಾರ್ಟಿಗೆ ನುಗ್ಗಲು ಪ್ರಯತ್ನಿಸಿದರು. ಅಲ್ಲಿ "ನೋ ಎಂಟ್ರಿ" [ಪ್ರವೇಶವಿಲ್ಲ] ಬೋರ್ಡು ತೋರಿಸಲಾಯಿತು.

ಈಗ ಇಂದಿರಾಗಾಂಧಿಯ ಮರಣ ಅಜೀಜ ಶೇಠರಿಗೆ ಕಾಂಗ್ರೆನಲ್ಲಿ ಪ್ರವೇಶ ದೊರಕಿಸಿತು- "ಜನತಾ ಪಕ್ಷ ತಾನೇ ಅಳಿಸಿ ಹೋಗುತ್ತದೆಂಬ" ಭವಿಷ್ಯ ನುಡಿದಿದ್ದಾರೆ ಅಜೀಜ ಶೇಠರು. ಈ ಹೇಳಿಕೆ ಯಾವ ದೇವರನ್ನು ಆಕರ್ಷಿಸಲಿಕ್ಕೆಂಬುದು ಮಾತ್ರ ತಿಳಿದಿಲ್ಲ- ಕಾಂಗ್ರೆ ಸೇರುವಾಗ ಚಂದ್ರಪ್ರಭಾ ಆರಸ ಅವರನ್ನು ಜೊತೆ ಸೇರಿಸಿಕೊಂಡಿದ್ದಾರೆ. ಇವರ ಕಾಂಗ್ರೆ ಪ್ರವೇಶ ರಾಜ್ಯದ ರಾಜಕೀಯದಲ್ಲಿ ಯಾವುದೇ ರೀತಿಯ ಪರಿಣಾಮ ಬೀರಲಾರದು. ಅಜೀಜ ಶೇಠರಲ್ಲಿರುವ ಅಧಿಕಾರ ಮೋಹವನ್ನು ಅರಿಯದವರಿಲ್ಲ. ಕಾರಣ ಅವರ ಅಗಲಿಕೆ ಜನತಾ ಪಕ್ಷಕ್ಕೂ ಗಂಡಾಂತರ ಕಾರಿಯಲ್ಲ., ಕಾಂಗ್ರೆಗೂ ದೊಡ್ಡ ಮುಸಲ್ಮಾನ ವ್ಯಕ್ತಿಯೊಬ್ಬ ತಮ್ಮ ಪಕ್ಷ ಸೇರಿದನೆಂಬ ಸಂತೋಷ ಇರುತ್ತದಲ್ಲದೆ ಹೆಚ್ಚಿನ ಪ್ರಯೋಜನವಿಲ್ಲ.

ಕ್ರಾಂತಿರಂಗ ಕಾಂಗ್ರೆಯ್ಯಲ್ಲಿ ವಿಲೀನ

ಬಂಗಾರಪ್ಪನವರ ಕ್ರಾಂತಿರಂಗ ಕಾಂಗ್ರೆಯಲ್ಲಿ ವಿಲೀನಗೊಂಡಿದೆ. ಯಾರ ಜೊತೆಯಲ್ಲೂ ಹೊಂದಿಕೊಳ್ಳುವ ಸ್ವಭಾವವಿರದ ಬಂಗಾರಪ್ಪನವರು 1983 ಗಲ್ಲಾದ ನಮ್ಮ ರಾಜ್ಯದ ಚುನಾವಣೆಯಲ್ಲಿ ಜನತಾ, ಸಿಪಿಐ[ಎಂ] ಪಕ್ಷಗಳೊಡನೆ ಸೇರಿ ಕಾಂಗ್ರೆ ಸೋಲಿಗೆ ಕಾರಣೀಭೂತರಾಗಿದ್ದರು. ತಾನೇ ಮುಖ್ಯಮಂತ್ರಿ ಆಗಬೇಕೆಂಬ ಪ್ರಯತ್ನ ಫಲಿಸದಿದ್ದಾಗ, ನಿರಾಶೆಗೊಂಡ ಬಂಗಾರಪ್ಪನವರು ಜನತಾ ಬಿಟ್ಟು ತನ್ನ ಹಳೆಯ ಕ್ರಾಂತಿರಂಗವನ್ನೇ ಉಳಿಸಿಕೊಂಡರು. ಕ್ರಾಂತಿರಂಗದ ಹೆಚ್ಚಿನ ಶಾಸಕರು ಜನತಾ ಪಕ್ಷದಲ್ಲಿ ಮಂತ್ರಿಗಳಾದರು. ಹಾಗೂ ಆ ಪಕ್ಷದಲ್ಲೇ ಉಳಿದರು. ಕನ್ನಡಿಗರಿಂದ ತನಗೆ ಹೆಚ್ಚಿನ ಬೆಂಬಲ ಆಪೇಕ್ಷಿಸಿದ್ದರು. ಸಿನಿಮಾ ನಟ ಡಾ॥ ರಾಜಕುಮಾರ ಅವರ ಹೆಸರಿನ ಉಪಯೋಗವನ್ನೂ ಮಾಡಿಕೊಂಡರು. ಹಿಂದುಳಿದವರನ್ನೂ, ದಲಿತರನ್ನೂ ಆಕರ್ಷಿಸುವ ಪ್ರಯತ್ನ ಮಾಡಿದರು. ಬುದ್ಧಿವಂತ ಜನತೆ ಬಂಗಾರಪ್ಪನವರಿಗೆ ಸರಿಯಾಗಿಯೇ ಬುದ್ಧಿ ಕಲಿಸಿತು. ಇದರಿಂದ ನಿರಾಶೆಗೊಂಡ ಬಂಗಾರಪ್ಪನವರು ಇಂದಿರಾಗಾಂಧಿಯ ಆಶೀರ್ವಾದಕ್ಕೆ ಪ್ರಯತ್ನ ನಡೆಸಿದರು.

ಚುನಾವಣೆಯ ಸಮಯದಲ್ಲಿ ಕಾಂಗ್ರೆಯನ್ನು ಮನಬಂದಂತೆ ತೆಗಳಿದ ಈ ಮಹಾಶಯ ತಾನು ಆರೋಪಿಸಿದ "ದರೋಡೆ ಕೋರರ" ಗುಂಪಿಗೆ ಮತ್ತೆ ಸೇರಿದ್ದಾರೆ. ಅಲ್ಲಿರುವ ಮಹಾರಥಿಗಳೆಲ್ಲ ಅಧಿಕಾರಕ್ಕಾಗಿಯೇ ಕಚ್ಚಾಡುತ್ತಿರುವಾಗ ಬಂಗಾರಪ್ಪನವರ ಒಳಗುದಿಯನ್ನರಿತ ಆ ಮಹಾಶಯರು ಅವರನ್ನು ಎಲ್ಲಿಡಬೇಕೋ ಅಲ್ಲಿಯೇ ಇಡುತ್ತಾರೆಂಬುದರಲ್ಲಿ ಸಂಶಯವಿಲ್ಲ. ಈಗಂತೂ ಗುಂಡೂರಾಯರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾಗಿದ್ದಾರೆ. ಆದರೆ ನಾನೇ ಮುಖ್ಯಮಂತ್ರಿಯಾಗಬೇಕೆಂದು ಗುಂಡೂರಾಯರೂ ಸಾರಿದ್ದಾರೆ, ಬಂಗಾರಪ್ಪನವರೂ ಕನಸು ಕಾಣುತ್ತಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಗುಂಡೂರಾಯರದ್ದೆ ಮೇಲುಗೈ ಎಂದರೆ ತಪ್ಪಾಗಲಿಕ್ಕಿಲ್ಲ. ಆದ್ದರಿಂದ ಕಾಂಗ್ರೆಯಲ್ಲಿ ತನಗೆ "ಛಾನ್ಸ್" ಇಲ್ಲವೆಂದು ತಿಳಿದ ಕೂಡಲೇ ಇನ್ನು ಕೆಲವೇ ತಿಂಗಳಲ್ಲಿ "ಉದಯವಾಯಿತು ನನ್ನ ಕ್ರಾಂತಿ ರಂಗ" ಎಂಬ ಬೋರ್ಡನ್ನು ಶಿವಾನಂದ ಸ್ಟೋರ್ಸಿನ ಹತ್ತಿರ ನೋಡಿದ್ದಾದರೆ ನೀವು ಯಾರೂ ಆಶ್ಚರ್ಯ ಪಡಬೇಕಾದ್ದಿಲ್ಲ.

ಕರ್ನಾಟಕದಲ್ಲಿ ದಮಕ ಪ್ರವೇಶ

ಭಾರತೀಯ ಜನತಾ ಪಾರ್ಟಿಯನ್ನು ತನ್ನ ಸ್ವಂತ ಸೊತ್ತಿನಂತೆ ಉಪಯೋಗಿಸಿಕೊಂಡು ಕಡೆಗೆ ಆ ಪಕ್ಷದಿಂದ ಹೊರ ಹಾಕಲ್ಪಟ್ಟ ಎ.ಕೆ. ಸುಬ್ಬಯ್ಯನವರು ಕನ್ನಡನಾಡು ಪಕ್ಷವನ್ನು ರಚಿಸಿ ಬಿಜೆಪಿಯ ಶಕ್ತಿ ಕುಂದಿಸುವಲ್ಲಿ ಹಾಗೆಯೇ ತಮ್ಮ "ಸ್ಟಂಟ್"ಗಳ ಮೂಲಕ ಜನರ ಬೆಂಬಲ ಪಡೆಯುವಲ್ಲಿ ವಿಫಲರಾದಾಗ ದಿಲ್ಲಿಯಲ್ಲಿ ಹುಟ್ಟಿಕೊಂಡ ದಲಿತ ಮಜದೂರ ಕಿಸಾನ್ ಪಕ್ಷ ಇವರಿಗೆ ಆಸರೆಯಾಗಿ ಬಂದಿದೆ. ಚರಣಸಿಂಗ್ ಅವರು ಎ. ಕೆ. ಸುಬ್ಬಯ್ಯನವರನ್ನು ಏಕದಂ ಕಾರ್ಯದರ್ಶಿಯನ್ನಾಗಿಯೇ ನೇಮಿಸಿದರು. ಬಾಯಿಯಲ್ಲಿ ಪ್ರಜಾಪ್ರಭುತ್ವ ಘಟಿಸುತ್ತಿರುವ ನಮ್ಮ ದೇಶದಲ್ಲಿರುವ ಬಂಡವಳಶಾಹಿ ಪಕ್ಷಗಳ ಹಣೇ ಬರಹವೇ ಇದಾಗಿದೆ. ಸದ್ಯಕ್ಕೆ ಮೈಸೂರಿನಲ್ಲಿ ಬಾಜಾಪದ ಕೆಲವರನ್ನು ತಮ್ಮ ಪಕ್ಷಕ್ಕೆ ಆಕರ್ಷಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಇವರಿಂದಾಗಿ ಕರ್ನಾಟಕದ ರಾಜಕೀಯದಲ್ಲಿ ಬಹಳ ಬದಲಾವಣೆಯಾಗಬಹುದೆಂದು ಭಾವಿಸುವುದು ಸರಿಯಾಗಲಾರದು. ●

(5ನೇ ಪುಟದಿಂದ)

ಅವಲಂಭಿಸದೆನೇ ಸ್ವತಂತ್ರವಾಗಿ ಕಾರ್ಮಿಕ ವರ್ಗವನ್ನು ಸಂಘಟಿಸಬೇಕಾಗಿದೆ ಎಂಬ ಪಾಠ ಕಲಿಸಿದೆ.

ಎರಡು ಭಿನ್ನ ಪ್ರವೃತ್ತಿಗಳು

ಈ ಐಕ್ಯ ಎಡಪಂಥೀಯ ವಿರೋಧದ ಬಗ್ಗೆ ಯೋಚಿಸುವಾಗ ಕಮ್ಯುನಿಸ್ಟ್ ಹಾಗೂ ಸೋಶಲಿಸ್ಟ್ ಆಂದೋಲನಗಳ ನಡುವಿನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಭಾರತದಲ್ಲಿ ಕಮ್ಯುನಿಸ್ಟ್ ಆಂದೋಲನ ಆರು ದಶಕಗಳಿಗೂ ಮುನ್ನ ಉದಯಗೊಂಡದ್ದು ಅಂತರಾಷ್ಟ್ರೀಯ ಕಾರ್ಮಿಕ ವರ್ಗದ ಆಂದೋಲನದ ಭಾಗವಾಗಿ. ಅದರ ಕಾರ್ಯಾಚರಣೆಯಲ್ಲಿ ಏನೇ ನ್ಯೂನತೆಗಳು ತಪ್ಪುಗಳು ಕಂಡುಬಂದರೂ ತನ್ನ ಮೂಲಭೂತ ವರ್ಗ ಚಾರಿತ್ರ್ಯ ಹಾಗೂ ಕಾರ್ಮಿಕ ವರ್ಗದ ದೃಷ್ಟಿಕೋನದಿಂದಾಗಿ ಅವನ್ನೆಲ್ಲವನ್ನೂ ಮೀರಿ ಮುನ್ನಡೆಯಲು ಅದಕ್ಕೆ ಸಾಧ್ಯವಾಗಿದೆ.

ಸಿ. ಎಸ್. ಪಿ. ಕೂಡಾ 50 ವರ್ಷಗಳ ಹಿಂದೆ ಸುಮಾರಾಗಿ ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ ಆಂದೋಲನದ ಪ್ರಭಾವದಿಂದಲೇ ಹುಟ್ಟಿ ಬೆಳೆದು ಬಂದಿದ್ದರೂ ಕೂಡಾ ಅದು ಹಾಗೂ ಅದರಿಂದಲೇ ಬಂದಿರುವ ವಿವಿಧ ಸಮಾಜವಾದೀ ಪಕ್ಷಗಳು ಸುಮಾರಾಗಿ ಕಾರ್ಮಿಕವರ್ಗೇತರ ಪ್ರಜಾಪ್ರಭುತ್ವವಾದೀ ಪಕ್ಷಗಳೇ.

ಮುಹಾ ಯುದ್ಧದ ಹಿಂದಿನ ವರ್ಷಗಳಲ್ಲಿ ಅವೆರಡೂ ಸೇರಿ ಬಹಳಷ್ಟು ಕೆಲಸಮಾಡಿ, ನಂತರ ಪರಸ್ಪರ ದೂರವಾಗಿ, ಇತ್ತೀಚಿಗೆ ಮತ್ತೆ ಐಕ್ಯ ಕಾರ್ಯಾಚರಣೆ ಬೆಳೆದು ಬರುತ್ತಿರುವುದು ಒಂದು ಸಕಾರಾತ್ಮಕ ಬೆಳವಣಿಗೆಯೇನೋ ನಿಜ. ಆದರೆ ಇದು ಈ ಎರಡು (ಕಾರ್ಮಿಕ ವರ್ಗ ಹಾಗೂ ಕಾರ್ಮಿಕ ವರ್ಗೇತರ) ಪ್ರವೃತ್ತಿಗಳ ನಡುವೆ ಇನ್ನೂ ಇರುವ ಕಂದರದತ್ತ ನಮ್ಮನ್ನು ಕುರುಡಾಗಿಸಬಾರದು.

ಕಾರ್ಮಿಕ ವರ್ಗದ ಒಂದು ಸಾಮೂಹಿಕ ಕ್ರಾಂತಿಕಾರೀ ಪಕ್ಷದಲ್ಲೂ ಕೂಡಾ ಈ ಕಾರ್ಮಿಕ ವರ್ಗೇತರ ಪ್ರವೃತ್ತಿ ತಲೆಯೆತ್ತುವ ಸಾಧ್ಯತೆಯಿದೆ ಎಂಬ ಬಗ್ಗೆಯೂ ಸಿ. ಪಿ. ಐ (ಎಂ) ಪೂರ್ಣ ಅರಿವು ಹೊಂದಿದೆ. ಆದ್ದರಿಂದಲೇ ಪಕ್ಷದ ದಸ್ತಾವೇಜುಗಳಲ್ಲಿ ಬಲ ಹಾಗೂ "ಎಡ" ಮಾರ್ಗಚ್ಯುತಿಗಳ ವಿರುದ್ಧ ಸತತ ಸೈದಾಂತಿಕ ಹೋರಾಟದ ಮೇಲೆ, ವಿಮರ್ಶೆ ಹಾಗೂ ಆತ್ಮ ವಿಮರ್ಶೆಯ ವಿಧಾನದ ಬಳಕೆಯ ಮೇಲೆ ವಿಶೇಷ ಒತ್ತು ನೀಡಿರುವುದು. ಇದಿಲ್ಲದೆ ಪಕ್ಷ ಕಾರ್ಮಿಕ ವರ್ಗದ ಸಾಮೂಹಿಕ ಕ್ರಾಂತಿಕಾರಿ ಪಕ್ಷವಾಗಿ ಬೆಳೆಯಲಾರದು.

ಕಾಂಗ್ರೆಸ್ [ಐ]ನ್ನು ಸೋಲಿಸಲು ಕಾರ್ಮಿಕ ವರ್ಗಕ್ಕೆ ಕರೆ

ದೇಶದ ಜನತೆಗೆ ಸುಭದ್ರ ಸರಕಾರವನ್ನು ಒದಗಿಸುವ ಮತ್ತು ಬೆಲೆ ಏರಿಕೆಯನ್ನು ತಡೆಗಟ್ಟುವ ಆಶ್ವಾಸನೆಯೊಂದಿಗೆ 1980 ರಲ್ಲಿ ಮರಳಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ [ಐ] ಪಕ್ಷವು, ಕಳೆದ ಐದು ವರ್ಷಗಳ ತನ್ನ ಆಳ್ವಿಕೆಯಲ್ಲಿ ಕಾರ್ಮಿಕ ವರ್ಗದ ಮತ್ತು ಜನಸಾಮಾನ್ಯರ ಜೀವನವನ್ನು ಅತ್ಯಂತ ದುಸ್ತರವನ್ನಾಗಿ ಮಾಡಿದೆ. ವರ್ಷದಿಂದ ವರ್ಷಕ್ಕೆ ಜನಸಾಮಾನ್ಯರ ಮೇಲೆ ಹೆಚ್ಚು ಹೆಚ್ಚು ತೆರಿಗೆಗಳನ್ನು ಹೇರಿದ ಮತ್ತು ಅಗಾಧ ಪ್ರಮಾಣದ ಕೊರತೆ ಹಣವನ್ನು [ಡಿಫಿಸಿಟ್ ಫೈನಾನ್ಸಿಂಗ್] ನಿರ್ಮಿಸಿದ ಪರಿಣಾಮವಾಗಿ ನಿತ್ಯೋಪಯೋಗಿ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಹಣದುಬ್ಬರವು ಹಿಂದೆಂದೂ ಕಂಡರಿಯದ ಅಗಾಧ ಪ್ರಮಾಣಕ್ಕೆ ಏರಿದೆ. ವರ್ಷದಿಂದ ವರ್ಷಕ್ಕೆ ಕಪ್ಪು ಹಣದ ಪ್ರಮಾಣವು ಹೆಚ್ಚಾಗುತ್ತಿದ್ದು ದೇಶದಲ್ಲಿ ಒಂದು ಸಮಾನಾಂತರ ಆರ್ಥಿಕ ವ್ಯವಸ್ಥೆಯೇ ನಡೆಯುತ್ತಿದೆ. ರಾಜಕೀಯ ಭ್ರಷ್ಟಾಚಾರಕ್ಕಾಗಿ ಅಗಾಧ ಪ್ರಮಾಣದ ಕಪ್ಪು ಹಣವನ್ನು ಉಪಯೋಗಿಸುತ್ತಿರುವ ಕಾಂಗ್ರೆಸ್ [ಐ] ಪಕ್ಷದ ಸರಕಾರವು ಕಪ್ಪು ಹಣವನ್ನು ನಿರ್ಮೂಲನ ಮಾಡುವ ಯಾವ ಕ್ರಮವನ್ನೂ ಕೈಗೊಳ್ಳುವುದಿಲ್ಲ. ಆಡಳಿತದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ತಮ್ಮ ಜೀವನ ಮಟ್ಟದ ಮೇಲೆ ನಡೆಯುತ್ತಿರುವ ದಾಳಿಗಳಿಂದ ರಕ್ಷಿಸಿಕೊಳ್ಳಲು ಸಂಘಟಿತ ಹೋರಾಟ ಮಾಡುವ ಕಾರ್ಮಿಕ ವರ್ಗದ ಮೇಲೆ ಕರಾಳ ಕಾನೂನುಗಳನ್ನು ಹೇರಲಾಗಿದೆ. ಹಲವು ದಶಕಗಳ ತ್ಯಾಗ, ಬಲಿದಾನಗಳ ಫಲವಾಗಿ ಬ್ರಿಟಿಷರ ಕಾಲದಿಂದಲೂ ಈ ದೇಶದ ಕಾರ್ಮಿಕರು ಅನುಭವಿಸುತ್ತಾ ಬಂದಿರುವ ಹಲವಾರು ಹಕ್ಕುಗಳನ್ನು ಕಿತ್ತುಕೊಳ್ಳಲಾಗಿದೆ.

ಟ್ರೇಡ್ ಯೂನಿಯನ್ ಕಾನೂನು ಕೈಗಾರಿಕಾ ಸಂಬಂಧಗಳ ಕಾನೂನು ಮತ್ತು ವೇತನ ಪಾವತಿ ಕಾನೂನಿಗೆ ತಿದ್ದುಪಡಿಗಳನ್ನು ಮಾಡುವ ಮೂಲಕ ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಲಾಗಿದೆ. ಆಸ್ಪತ್ರೆಗಳ ಮತ್ತು ಶೈಕ್ಷಣಿಕ ಸಂಸ್ಥೆಗಳ ನೌಕರರ ಸೇವೆಗೆ ಸಂಬಂಧಿಸಿದಂತೆ ಹೊಸ ಕಾನೂನು ಮಾಡುವ ಮೂಲಕ ಈ ಕಾರ್ಮಿಕರನ್ನು ಕಾರ್ಮಿಕ ಕಾನೂನುಗಳ ವ್ಯಾಪ್ತಿಯಿಂದ ಹೊರಗಿಡಲಾಗಿದೆ.

ಕೈಗಾರಿಕಾ ಸಂಬಂಧಗಳ ಕಾನೂನಿನ ಪ್ರಕಾರ ಕಾರ್ಮಿಕ ಸಂಘಗಳೊಂದಿಗೆ ಆಡಳಿತಗಳು ಮಾಡಿಕೊಂಡ ಒಪ್ಪಂದಗಳನ್ನು ಹೊಸ ಕಾನೂನುಗಳ ಮೂಲಕ ರದ್ದುಪಡಿಸಿ ಸರಕಾರವು ಎಲ್ಐಸಿ, ಜಿ ಐಸಿ, ಸ್ಟೇಟ್ ಬ್ಯಾಂಕ್ ಇತ್ಯಾದಿ ಸಂಸ್ಥೆಗಳಲ್ಲಿ ಕಾರ್ಮಿಕರ ಶೋಷಣೆಯನ್ನು ತೀರಾ ಅನೈತಿಕ ಮಟ್ಟಕ್ಕೆ ಇಳಿಸಿದ.

ಕೈಗಾರಿಕಾ ಘಟಕಗಳ ಬಂದ್ ಮತ್ತು ಲಾಕೌಟ್‌ಗಳು ಹೆಚ್ಚಾಗುತ್ತಿದ್ದು ಬಂಡವಾಳ ಶಾಹಿಗಳ ಈ ಸಮಾಜ ವಿರೋಧಿ ಕೃತ್ಯಗಳಿಗೆ ಕೇಂದ್ರ ಸರಕಾರದ ಧೋರಣೆಗಳು ಪ್ರೋತ್ಸಾಹ ನೀಡುತ್ತಿವೆ. ಮೊದಲೇ ಭೀಕರ ಪರಿಸ್ಥಿತಿಯಲ್ಲಿರುವ ನಿರುದ್ಯೋಗ ಸಮಸ್ಯೆಯು ಬಂದ್ ಮತ್ತು ಲಾಕೌಟ್‌ಗಳಿಂದಾಗಿ ಮತ್ತಷ್ಟು ಉಲ್ಬಣಗೊಂಡು, ಮಿಲಿಯ ಗಟ್ಟಲೆ ಯುವಕ ಯುವತಿಯರು ಉದ್ಯೋಗವಿಲ್ಲದೆ ಅಲೆದಾಡುವ ಮತ್ತು ಲಕ್ಷಾಂತರ ಕುಟುಂಬಗಳು ಉಪವಾಸ ಬೀಳುವ ಪರಿಸ್ಥಿತಿ ಬಂದಿದೆ. ಕಾಂಗ್ರೆಸ್ (ಐ) ಸರಕಾರದ ದಿವಾಳಿಕೋರ ಆರ್ಥಿಕ ನೀತಿಯಿಂದಾಗಿ ನಮ್ಮ ದೇಶವು ವಿದೇಶಗಳ ಸಾಲಗಾರನಾಗಿದೆ. ವಿದೇಶಿ ಸಾಲದ ಪ್ರಮಾಣವು 50,000 ಕೋಟಿ ರೂಪಾಯಿಗಳನ್ನು ದಾಟಿದ್ದು, ಸಾಲ ಕೊಡುವ ವಿದೇಶಿ ಸರಕಾರಗಳು ನಮ್ಮ ದೇಶದ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡುವ ಅವಕಾಶಗಳು ಹೆಚ್ಚಾಗುತ್ತಿವೆ. ಈ ದೇಶದ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯಲು ಬಹುರಾಷ್ಟ್ರೀಯ ಕಂಪನಿಗಳಿಗೆ ಅನಿರ್ಬಂಧಿತ ಅವಕಾಶಗಳನ್ನು ಮಾಡಿಕೊಡಲಾಗಿದೆ.

ಶ್ರೀಮತಿ ಇಂದಿರಾಗಾಂಧಿಯವರ ಹತ್ಯೆಯಿಂದಾಗಿ ಜನತೆಯ ಮನಸ್ಸಿನಲ್ಲಿ ಉದ್ಭವಿಸಿರುವ ಅನುಕಂಪವನ್ನು ಉಪಯೋಗಿಸಿ ಈ ಚುನಾವಣೆಯಲ್ಲಿ ಅಧಿಕಾರಕ್ಕೆ ಮರಳಿ ಬರಲು ಕಾಂಗ್ರೆಸ್ (ಐ) ಪಕ್ಷವು ಪ್ರಯತ್ನಿಸುತ್ತಿದೆ. ಶ್ರೀಮತಿ ಇಂದಿರಾಗಾಂಧಿಯವರ ಕಾರ್ಮಿಕ ವಿರೋಧಿ, ಸರ್ವಾಧಿಕಾರಿ ಧೋರಣೆಗಳನ್ನೂ, ತುರ್ತು ಪರಿಸ್ಥಿತಿಯಲ್ಲಿ ನಡೆಸಿದ ಅಮಾನುಷ ದೌರ್ಜನ್ಯಗಳನ್ನೂ ಈ ದೇಶದ ಜನತೆ ಮರೆತಿಲ್ಲ. ಇಂದಿಗೂ ಕಾಂಗ್ರೆಸ್ [ಐ] ಪಕ್ಷವು ಅದೇ ಕಾರ್ಮಿಕ ವಿರೋಧಿ, ಪ್ರಜಾಪ್ರಭುತ್ವ ವಿರೋಧಿ, ಸರ್ವಾಧಿಕಾರಿ ಧೋರಣೆಗಳನ್ನು ಮುಂದುವರಿಸುತ್ತಿದೆ. ಶ್ರೀಮಾನ್ ರಾಜೀವ್ ಗಾಂಧಿಯವರು ಇಂದಿರಾ ಸರಕಾರದ ದಿವಾಳಿಕೋರ ಆರ್ಥಿಕ ನೀತಿಯನ್ನೇ ಮುಂದುವರಿಸುತ್ತಾರೆಂಬುದು ಅವರ ಇತ್ತೀಚಿನ ಭಾಷಣದಿಂದಲೇ ವ್ಯಕ್ತವಾಗುತ್ತದೆ. ಕಾಂಗ್ರೆಸ್ [ಐ] ಸರ್ವಾಧಿಕಾರದ ಬದಲಾಗಿ, ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ನೇತೃತ್ವದ ಪರ್ಯಾಯ ವ್ಯವಸ್ಥೆಯನ್ನು ಅಧಿಕಾರಕ್ಕೆ ತರುವ ಮೂಲಕ ಮಾತ್ರವೇ ಕಾರ್ಮಿಕರ ಮತ್ತು ಜನ ಸಾಮಾನ್ಯರ ತುರ್ತಿನ ಸಮಸ್ಯೆಗಳಿಗೆ ಪರಿಹಾರ ಪಡೆಯಲು ಸಾಧ್ಯವೆಂಬುದನ್ನು ಈ ಸಭೆಯು ಒತ್ತಿ ಹೇಳುತ್ತದೆ.

ಆದುದರಿಂದ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸರ್ವಾಧಿಕಾರಿ ಕಾಂಗ್ರೆಸ್ [ಐ] ಪಕ್ಷವನ್ನು ಕೋಮುವಾದಿ ಶಕ್ತಿಗಳನ್ನೂ ಸೋಲಿಸಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಲೋಕಸಭೆಗೆ ಚುನಾಯಿತರಾಗುವಂತೆ ಸರ್ವ ಪ್ರಯತ್ನವನ್ನೂ ಮಾಡಬೇಕೆಂದು ರಾಜ್ಯದ ದುಡಿಯುವ ಜನತೆಯನ್ನು ಈ ಸಭೆಯು ವಿನಂತಿಸುತ್ತದೆ.

[1984 ನವಂಬರ್ 14 ಮತ್ತು 15 ರಂದು ಮೈಸೂರಿನಲ್ಲಿ ಜರಗಿದ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಯ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯ.]

ಸ್ಟೈಪೆಂಡರಿ ಪದವೀಧರರಿಗೆ ನ್ಯಾಯ ಸಿಗಲಿ

ನಮ್ಮ ರಾಜ್ಯದಲ್ಲಿಯ ನಿರುದ್ಯೋಗ ಸಮಸ್ಯೆ ಬಗೆಹರಿಸುವ ಸಲುವಾಗಿ ಕೆಲವು ವರ್ಷಗಳ ಹಿಂದೆ ನಿರುದ್ಯೋಗಿ ಪದವೀಧರರನ್ನು ಸ್ಟೈಫೆಂಡರಿಯಾಗಿ ಸರಕಾರದ ನಾನಾ ಶಾಖೆಗಳಲ್ಲಿ ನೇಮಿಸಿಕೊಳ್ಳಲಾಗಿತ್ತು. ಪ್ರಾರಂಭದಲ್ಲಿ ತಿಂಗಳಿಗೆ ರೂ 200 ಅಲಾವನ್ಸ್ ಕೊಡುತ್ತಿದ್ದು, ಚಳುವಳಿಯ ನಂತರ ಅದನ್ನು ರೂ 300 ಕ್ಕೆ ಏರಿಸಲಾಯಿತು.

ಹಿಂದಿನ ಗುಂಡೂರಾವ್ ಸರಕಾರ ಈಗಿನ ಹೆಗಡೆ ಸರಕಾರ ರಾಜ್ಯದಲ್ಲಿ ಕಳೆದ ಹಲವಾರು ವರ್ಷಗಳಿಂದ ಬರೀ ರೂ 300 ರಲ್ಲಿ ದುಡಿಯುತ್ತಿರುವ ಸ್ಟೈಫೆಂಡರಿಗಳನ್ನು ಖಾಯಂಗೊಳಿಸುವುದಾಗಿ ಆಶ್ವಾಸನೆ ನೀಡುತ್ತ ಬಂದಿದ್ದಾರೆ. ಸ್ಟೈಫೆಂಡರಿಗಳ ಈ ಬೇಡಿಕೆಗೆ ಸಿ. ಪಿ. ಐ (ಎಂ), ಸಿ.ಐಟಿಯು ಗಳು ಬೆಂಬಲ ನೀಡುತ್ತ ಬಂದಿವೆ. ಸರಕಾರದ ನಾನಾ ಶಾಖೆಗಳಲ್ಲಿ 60 ಸಾವಿರಕ್ಕೂ ಮೇಲ್ಪಟ್ಟು ಖಾಲಿ ಹುದ್ದೆಗಳಿದ್ದು, ಅವುಗಳನ್ನಿನ್ನೂ ತುಂಬಿಸಿಕೊಳ್ಳಲ್ಲದಿರುವುದರಿಂದ ಈ ಸ್ಟೈಫೆಂಡರಿಗಳನ್ನು ಆ ಸ್ಥಾನಗಳಲ್ಲಿ ನೇಮಿಸಿಕೊಳ್ಳಬೇಕೆಂದು ನಮ್ಮ ಸೂಚನೆಯಾಗಿದೆ. ನೆನೆಗುದಿಗೆ ಬಿದ್ದಿರುವ ಈ ಸ್ಟೈಪೆಂಡರಿಗಳ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸದೆ ಬೇರೆಯವರನ್ನು ನೇಮಕಾತಿ ಸಮಿತಿಗಳ ಮೂಲಕ ನೇಮಿಸಿಕೊಳ್ಳುವ ಕೆಲಸ ಮುಂದುವರಿದಿದೆ. ಸರಕಾರದ ಈ ನೀತಿಯನ್ನು ಖಂಡಿಸಬೇಕಾಗಿದೆ. ಇತ್ತೀಚೆಗೆ ಸ್ಟೈಪೆಂಡರಿಯವರು ಬೆಂಗಳೂರಿನಲ್ಲಿ ಮೆರವಣಿಗೆ ಮತಪ್ರದರ್ಶನ ನಡೆಸಿ ಬಂಧನಕ್ಕೊಳಗಾಗಿದ್ದಾರೆ. ಇವರ ಬೇಡಿಕೆಗಳನ್ನು ಕೂಡಲೇ ಬಗೆಹರಿಸಬೇಕೆಂದು ನಾವು ಕೇಳಿಕೊಳ್ಳುತ್ತೇವೆ. ಅದೇ ಸಮಯದಲ್ಲಿ ಸ್ಟೈಫೆಂಡರಿಯವರು ಬೇರೆಯವರ ಒತ್ತಡಕ್ಕೆ ಬಲಿ ಬೀಳದೆ, ತಮ್ಮ ಸಂಘಟನೆಯ ಐಕ್ಯತೆಯನ್ನು ಉಳಿಸಿಕೊಂಡು ತಮ್ಮ ನ್ಯಾಯವಾದ ಹಕ್ಕುಗಳಿಗಾಗಿ ಹೋರಾಟ ಮುಂದುವರಿಸಬೇಕೆಂದು ನಾವು ಕೇಳಿಕೊಳ್ಳುತ್ತೇವೆ.

[1ನೇ ಪುಟದಿಂದ]

ಕಂಗಾಲಾಗಿದ್ದ ಕೆಲವು ಲೋಕಸಭಾ ಸದಸ್ಯರ ಸಂಶಯವನ್ನು ದೂರ ಮಾಡಿದ್ದಾರೆ. ಲೋಕ ಸಭೆಯ ವಿಸರ್ಜನೆಯನ್ನೂ ಕೈಬಿಟ್ಟಿದ್ದಾರೆ.

ಎಲ್ಲಾ ವಿರೋಧ ಪಕ್ಷಗಳ ಐಕ್ಯತೆಯ ಕುರಿತು ಸರ್ವ ಪ್ರಯತ್ನ ನಡೆಯಿತು. ಒಂದು ಸಂದರ್ಭದಲ್ಲಿ ಜನತಾ–ಲೋಕದಳ ವಿಲೀನವಾಯಿತೆಂದೇ ಕಂಡುಬಂತು ಆದರೆ ಬಂಡವಾಳಶಾಹಿ ಪಕ್ಷಗಳಲ್ಲಿ ಬೇರುಬಿಟ್ಟಿರುವ ವ್ಯಕ್ತಿಗತ ರಾಜಕಾರಣ ಅಧಿಕಾರ ಲಾಲಸೆಗಳಿಂದಾಗಿ ಅದು ಸಾಧಿಸಲಿಲ್ಲ. ಕೊನೆಗೆ ಲೋಕದಳ ಬಹುಗುಣ ಅವರ ಪಕ್ಷಗಳೂ ಜನತಾ, ಕಾಂಗ್ರೆಸ್ (ಎಸ್) ಪಕ್ಷಗಳ ಕೆಲವರೆಲ್ಲಾ ಸೇರಿ ದಲಿತ ಮಜದೂರ ಕಿಸಾನ ಪಕ್ಷ (ದಮಕ) ರಚಿಸಿಕೊಂಡಿದ್ದಾರೆ ಸಿ. ಪಿ. ಐ (ಎಂ) ಅದನ್ನು ಸ್ವಾಗತಿಸಿದೆ.

ಕಾಂಗ್ರೆ ವಿರೋಧಿ ಮತಗಳು ಹರಿದು ಹಂಚಿಹೋಗಬಾರದೆಂಬ ದೃಷ್ಟಿಯಿಂದ ಎಲ್ಲ ವಿರೋಧ ಪಕ್ಷಗಳು ವಿಲೀನಗೊಂಡು ಒಂದೇ ಪಕ್ಷವಾಗಿ ಮತದಾರರ ಮುಂದೆ ಹೋಗದಿದ್ದರೂ ಕೂಡ, ಸ್ಥಾನ ಹೊಂದಾಣಿಕೆ ಮಾಡಿಕೊಂಡು ಕಾಂಗ್ರೆ ವಿರುದ್ಧ ಒಬ್ಬ ಉಮೇದುವಾರ ಸ್ಪರ್ಧಿಸುವಂತೆ ಮಾಡುವ ಮಹದುದ್ದೇಶವನ್ನು ಎಲ್ಲ ರಾಜಕೀಯ ಪಕ್ಷಗಳ ಮುಖಂಡರೂ ಘೋಷಿಸುತ್ತಲೇ ಬಂದಿದ್ದಾರೆ.

ಸಿ. ಪಿ. ಐ (ಎಂ) ತನ್ನ ನಿಲುವೆಯನ್ನು ಸ್ಪಷ್ಟಪಡಿಸಿದೆ. ಕಾಂಗ್ರೆಯನ್ನು ಸೋಲಿಸಲೇಬೇಕು ಅದರ ಜೊತೆಯಲ್ಲಿ ಜಾತಿಯ, ಛಿದ್ರಕಾರಿಶಕ್ತಿಗಳು ಸೋಲುವಂತೆ ಮಾಡಬೇಕು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಗೆಲುವಾಗಬೇಕೆಂದು ಹೇಳಿ ಮತಗಳ ವಿಭಜನೆಯನ್ನು ತಪ್ಪಿಸಲು ಸ್ಥಾನಗಳ ಹೊಂದಾಣಿಕೆ ಅಗತ್ಯವೆಂದೂ, ರಾಷ್ಟ್ರೀಯ, ಅಂತರಾಷ್ಟ್ರೀಯ ಸಮಸ್ಯೆಗಳ ವಿಷಯದಲ್ಲಿ ಸ್ಪಷ್ಟ ನಿಲುವೆ ತಾಳಿರುವ ಪಕ್ಷಗಳೊಡನೆ ಹೊಂದಾಣಿಕೆ ಮಾಡಿಕೊಂಡು ಚುನಾವಣೆಯನ್ನೆದುರಿಸಬೇಕೆಂದು ಕರೆಕೊಟ್ಟಿದೆ.

ರಾಜ್ಯ ಮಟ್ಟದಲ್ಲಿ ಸ್ಥಾನಗಳ ಹೊಂದಾಣಿಕೆಯಾಗಬೇಕೆಂದು ಸಿಪಿಐ (ಎಂ)ಹೇಳುತ್ತ ಬಂದಿದ್ದು ಈಗ ಇತರ ವಿರೋಧ ಪಕ್ಷಗಳೂ ಕೂಡ ಆ ನಿಲುವೆಯನ್ನು ಒಪ್ಪಿಕೊಂಡಿವೆ.

ಕಾಂಗ್ರೆಸ್ಸಿನ ದುರಾಡಳಿತೆಯಿಂದ ದೇಶದ ಜನತೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಸರಿಯಾದ ಪರಿಹಾರ ಕಂಡುಹಿಡಿದು ದೇಶದ ಸಮಗ್ರತೆಯನ್ನು ಉಳಿಸಿಕೊಳ್ಳಬೇಕಾದರೆ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳು ಒಂದು ನಿರ್ದಿಷ್ಟವಾದ ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಬೇಕು. ಜನರಲ್ಲಿ ಆತ್ಮವಿಶ್ವಾಸ ಹುಟ್ಟಿಸಬೇಕು. ಕಾಂಗ್ರೆ ವಿರುದ್ಧ ಬದಲಿ ಸರಕಾರ ರಚಿಸಲು ಸಾಧ್ಯವಿದೆ. ಮತದಾರರ ಸಹಕಾರ ಸಹಾಯ ಅಗತ್ಯವಿದೆಂದು ಅವರಲ್ಲಿ ಮನವರಿಕೆ ಮಾಡಿಕೊಡಬೇಕು.

ಪಶ್ಚಿಮ ಬಂಗಾಲ—ತ್ರಿಪುರಾ ಹಾಗೆಯೇ ಆಂಧ್ರ–ಕರ್ನಾಟಕ ಕಾಂಗ್ರೆ ವಿರೋಧಿ ಸರಕಾರಗಳ ಸಾಧನೆಗಳನ್ನು ಜನರ ಮುಂದಿಟ್ಟು ಕಾಂಗ್ರೆಯನ್ನು ಸೋಲಿಸಲಿಕ್ಕೆ ಬೇಕಾದ ತಂತ್ರಪ್ರಚಾರ ಪ್ರಕ್ಷೋಭೆಗಳನ್ನು ಮಾಡಿ ಜಯಗಳಿಸುವುದು ಈಗಿನ ಪರಿಸ್ಥಿತಿಯಲ್ಲಿ ಚರಿತ್ರಾರ್ಹ ಜವಾಬ್ದಾರಿಯಾಗಿದೆ.

ಅದನ್ನು ಸಾಧಿಸಲು ಎಲ್ಲರೂ ಒಟ್ಟಾಗಿ ದುಡಿಯೋಣ, ಜಯಗಳಿಸೋಣ.

ಬಿ.ಟಿ.ಎಸ್. ಪ್ರಯಾಣ ದುಬಾರಿ

ನಾಗರೀಕರಿಗೆ ಹೆಚ್ಚಿನ ಸೌಲಭ್ಯ ಒದಗಿಸುವ ಬೆಂಗಳೂರು ನಗರದಲ್ಲಿ ದಿನನಿತ್ಯ ಸಂಚಾರ ಮಾಡುವ ನಾಗರೀಕರು ತಮ್ಮ ಸಂಚಾರಕ್ಕೆ ಹೆಚ್ಚು ಹಣ ತೆರಬೇಕಾಗಿದೆ. ಪೂರ್ವ ಸೂಚನೆ ನೀಡದೆ ಈ ರೀತಿ ಅಕಸ್ಮಾತ್ತಾಗಿ ಬಿ. ಟಿ. ಎಸ್. ಪ್ರಯಾಣದ ದರ ಹೆಚ್ಚಿಸಿರುವುದನ್ನು ಸಿ. ಪಿ. ಐ (ಎಂ) ರಾಜ್ಯ ಸಮಿತಿ ಖಂಡಿಸುತ್ತದೆ.

Printed & Published by P Ramachandra Rao by him on behalf of the Communist Party of India (Marxist) Karnataka State Committee, K. V. Temple Street, Sultanpet, Bangalore-560052 Editoral and managerial office, L-56, K V. Temple Street. Sultanpet. B-53 Phone : 24154
Editor ; P. Ramachandra Rao Managing Editor : N. K. Upadhyaya